२ वरील मजकूर वाचून आमच्या ताब्यांतील सर्व मास्तर लोक आपापलीं कामें मोठ्या तत्परतेनें करून, सरती किंवा हुकुमाची अमान्यता केल्याबद्दल किंवा गैरशिस्त वर्तणूक केल्याबद्दल, आपली अप्रतिष्ठा व नुकसान होऊं देणार नाहींत अशी आशा आम्हीं बाळगतों.

मु॥ मुधोळ<br>ता० २२ फेब्रुआरी १८६६

*Vishwanath Vishnoo*<br>डि० इ० इ० जि० कलादगी.

---

*Notification.*

## जाहिरात.

कलादगी जिल्ह्यांतील सर्व स्कूलमास्तर लोकांस देण्यांत येते कीं, ज्यापक्षीं जिल्हा मजकुरीं इतर खात्यांत सर्व दप्तर व पत्रव्यवहार कानडी भाषेंत चालू झाला आहे, त्यापक्षीं आमच्या खात्यांत ही त्याप्रमाणेंच चालू करणें योग्य आहे. यास्तव मास्तरांनीं आमच्याकडे रिपोर्ट किंवा दुसरे कागदपत्र पाठविणें तें ता० १ माहे मे १८६६ पा-

सून कानडी भाषेंत लिहून पाठवित जावें.

सु॥ मुधोळ
ता॰ २२ फेब्रुवारी १८६६

Vishwanath Vishnoo.
डि॰ इं॰ इं॰ जिल्हा कलादगी.

---

## Correspondence.

### ಪತ್ರಗಳ ಸಾರಾಂಶವು.

ಹಾವೇರಿ— ಇಲ್ಲಿ ಎಳ್ಳು ಬೆಳೆಯು ಭಾವಿಯ ನೀ-
ರಿನ ಮೂಲಕವಾಗಿ ಬಹು ದೊಡ್ಡ ಪ್ರಮಾಣದಿ ಯುತ್ತದೆ.
ರಾ॰ ರಾ॰ ಮಾಧವರಾವ ಕೃಷ್ಣ ಇವರು ಮೊದಲು ಶಾಲೆ ಸ್ಥಾಪಿ-
ಸಿ ಹಾಗೆ ಬಹಳ ಸಹಾಯ ಮಾಡಿದ್ದಾರೆ, ಕಡೆಯಲ್ಲಿ ರಮಾ-
ನಂದ ದಯಾರಾಮ ಇವರು ಬಹು ಶ್ರಮದಿಂದ ೧೪॰ ರೂ॰
ರಾಮೂ ದಿಕ್ಷಿತ ಆರಂಭಿಸಿದ ಶಾಲಾ ಗೃಹವನ್ನು ಇವರೇ ಮ-
ಹಣ ಸಂಪಾದಿಸಿ ಕಡೆಗಾಗಿ ಸಿದ್ಧಮಾಡಿದವರು,
ಸ್ಕೂಲದಾರರೂ ಚನ್ನಾಗಿ ಲಕ್ಷ್ಯಕೊಡುತ್ತಾರೆ.

---

ಹುಲಕೋಟಿ— ಎರಡು ವರ್ಷಗಳ ಕೆಳಗೆ ಶಾಲೆಯ
ಸ್ಥಾಪನವಾಯಿತು. ಶಾಲಾ ಗೃಹವು ಸಣ್ಣಗಿದ್ದದರಿಂದ ಹು॰
ಬಳದವರು ೫॰॰ ಹುಲಕೋಟಿಯವರು ೪॰॰ ಸರಕಾ-
ರದವರು ೪॰॰ ರುಪಾಯಿ ಕೊಡುವದಕ್ಕೆ ಒಪ್ಪಿಕೊಂಡದರಿಂ

ದ ಹೆಗ್ಗಣ ಜನೇರಿಸಲಾಯಿತು. ದಹಲನ ನಡೆದವು. ಅವರ-
ಸುಪುತ್ರ ಸೋದರ ಮರ್ದನಾನನ್ನು ವಸೂಲಾಗಿಲ್ಲದಿರಲು ದ
ಕಲಿನ ನಿಲ್ಲುವದಾದ ಕಾರಣ ದಿವಸ ಅನ್ನ ನೆಡೆಸ್ತ ದತ್ತ ಅಗ್ಗ
ವಾಗಿ ವಸೂಲು ಮಾಡಿಸಬೇಕು.

---

ಬನೋಶಿ — ಖಾಜಿಮೇಜು ಪತ್ರಿಕೆಗಳಿಗೋಸ್ಕರ
೩೩॥ ರೂಪಾಯಿ ವಸೂಲಾಯಿತು. ಮನೆತೆರಿಗೆಯನ್ನು
ಯೇನೂ ಆಗಲಿಲ್ಲ. ಮರದ ಮೂರು ದಿವಸಗಳವರೆಗೆ ಮಾಮ-
ಲೇದಾರರು ಇಲ್ಲಿ ಬಂದ ಮೇಲೆ ಆಗಲಿಕ್ಕಿಲ್ಲ. ಸಾಸರಾಜನ
ಯಶವಂತನನ್ನು ಸೆರೆ ಹಿಡಿದು ಸೌತ್ತುಮಾಸ್ತರನು, ಸಿದ್ದಾಮರರ
ಜಮಾದಾರರು ಕಾರೆಯನ್ನು ಸೋದಿನ ಸಂತೋಷ ಪಡುವರು. ದ
ಪಾಯಿಸಿ ೧ ಆನೆ ಪ್ರಸಾರ ಸತ್ರದಿಂದ ವಸೂಲಿಯ ನಡೆದವು.

---

ತೇರಗಾಂವ — ಊರಲ್ಲಿ ಮನೆಗಳು ೭೦೦, ಊರವ-
ಸೂಲು ೫೦೦ — ನಾಡುಜಡಂಜಕ ಅರಲನಾಮತಂತ್ರ
ಮಾಮಲೇದಾರ ಸಿಕ್ಕುಮದಿಂದ ಕಾರೆಯ ಸ್ಥಾವನವಾಯ
ತು. ... ದಂಡ ಸರ್ಕಾರ ಸೋಸಾರಿಂದ ಇವರು ಕಾರಕತ
ಸ್ತ್ರೀ ಪು. ... ಮನೆಯನ್ನು ಕೊಟ್ಟಿದ್ದಾರೆ —

**ಶಿಕ್ಷಾಪೂರ** — ಊರಲ್ಲಿ ೧೦,೦೦ ಜನಸಂಖ್ಯೆ. ಮಹಾ
ಲಕರಿ ಸೋಂಕಿಂದ ಬಾಪೂಜಿಯವರ ಕ್ರಮದಿಂದ ಶಾಲೆಯು
ಯಿತು. ಮಟಗಾಂವ ಊರವರು ೧೮೦ ಸರಕಾರದಿಂದ ೧೫೦ರೂ.
ವರ್ಷಕ್ಕೆ ಕೊಡುತ್ತಾರೆ. ಊರವರು ರೂಪಾಯಿಗೆ ೧ ಆಣೆ ತೆರಿಗೆ
ಕೊಡುವವರಿದ್ದರೂ ತೆಂಬಟ್ಟರಿಂದ ಶಾಲೆಯ ಮನೆಗಾಗಿ
ಅವರು ಮೊದಲು ಒಪ್ಪಿಕೊಂಡ ೫೦೦ ರೂಪಾಯಿ ಸಿಕ್ಕಾಯಿತು.

---

**ಮೊರಬ** — ೩೦.೩೦.ರವರ ಸಾಹೇಬರು ಶಾಲೆಯನ್ನು
ಸೋಧಿಸಿ ಸಂತೋಷಪಟ್ಟರು. ತೃಪ್ತರು ರೂಪಾಯಿಗೆ ೧ ಆಣೆ
ಪ್ರಕಾರ ತೆರಿಗೆ ಕೊಡುವದಕ್ಕೆ ಒಪ್ಪಿಕೊಂಡಿದ್ದಾರೆ- ತಾ|| ೧೩ನೇ
ಫೆಬ್ರುವರಿ ದಿವಸ ಇಲ್ಲಿ ಭೂಕಂಪವಾಯಿತು.

---

**ಹುಲ್ಲೂರ** — ಮಾ. ರಾಮಜೀ ಹರಿ ಇವರ ಕ್ರಮದಿಂದ ೨
ವರ್ಷಗಳ ಹಿಂದೆ ಶಾಲೆಯು ಬಾಯಿತು. ಊರಲ್ಲಿ ಕ್ಷಾಮ
ವೆ ಬಹಳ ಅಪಾಯಕರವಾಗಿದ್ದುದರಿಂದ ಊರವು ಜನ ಮಾತ್ರ
ರವು ಲಂಕೀಕೊಂಡರು, ಮತ್ತು ಉಳಿದ ಜನರನ್ನು ಗಾಯಿತ್ರಿ
ಯಲ್ಲಿದ್ದಾರೆ. ಆದರೆ ಹುಡುಗರು ಬಳ್ಳಾರಿದಿಂದ ಯಾದಗಿರಿ
ಹೋಗಿ ಮಾತ್ರ ರವು ಬಂದರೆ ಅನುಕೂಲವಿಲ್ಲ. ಶಿಕ್ಷಕರ ಧಾ
ರೆಗಳು ಶಾಲೆಯನ್ನು ಸೋಧಿಸಿ ಸಂತೋಷಪಟ್ಟರು —

ಕಲಾದಗಿ — ಮಲ್ಲಬಾನ ನವಪ್ಪನವರು ತಾ॥ ೧೯೨ ಜನವರಿ ದಿವಸ ಶಾಲೆಯನ್ನು ಸೋಂಡಿಸಿ ತೋಂಡಪಟ್ಟರು. ಮಿ. ಜಟಜ. ಶಾ ಶೋಕಿಗಳು ತಮ್ಮ ಕಟ್ಟಿನ ಸಾಮಾಧಾನ ಕೀಲ ಮೊದಲಾದವರಿಂದ ೧೦೦ ರೂಪಾಯಿ ಕೂಡಿಸಿದ್ದಲ್ಲದೆ ತಾವು, ಊರವರೂ ಕೂಡಿ ೨೫೦ ರೂ. ಭರ್ತಿ ಮಾಡಿದರು. ಸರಕಾರದವರ ಕಡೆಯಿಂದ ೧೫೦ ಸಹಾಯ ಶಿಕ್ಷಣ ದೊರೆಯಿತಾಗಿ ದೆ — ಸ್ವಪನಾದಿಂದ ಮುರಮಪ್ಪರಿಗೆ ಯಡಗೊಳ್ಳಲು ದಾಂಡು ಮನೆಕಟ್ಟಿಸಿ, ಮೇಲುಪ್ಪರಿಗೆಯಲಿ ಇಂಗ್ಲಿಷ ಶಾಲೆಯನ್ನು ಕೆಳಗಿನ ಕನ್ನಡ ಶಾಲೆಯನ್ನು ನಡೆಸ ಆರೋಗ್ಯವನ್ನೂ ಇಟ್ಟು.

---

ಯಲ್ಲಾಪುರ — ತಾ॥ ೨೦ ನೇ ಸಪ್ಟಂಬರ ೧೯೩೬ ಮಟಮಿವರು ಶಾಲೆಗೆ ಬಂದು ವಿದ್ಯಾರ್ಥಿಗಳನ್ನು ತಂಡ ಸಂತೋಷಪಟ್ಟರು.

---

ಕೆಲವು ಪತ್ರಗಳನ್ನು ಕೇಳಿಸಬಹುದಾಗಿತ್ತು ಆದರೆ ಸ್ಥಳವಿಲ್ಲ.

# ಮಠಪತ್ರಿಕೆಯು.

ಪುಸ್ತಕ ೧ ೧೩ ಸಂ.

ಬೆಳಗಾವ. ಮಾರ್ಚ ಅಪ್ರೇಲ ೧೮೮೮

## *Education*.

### ಶಿಕ್ಷಣವು.

ಶಿಕ್ಷಣದ ಮುಖ್ಯವಾದ ಹೇತುಗಳು ಯರಡು - ಶಾರೀರ ಮಾನಸಿಕ ಶಕ್ತಿಗಳನ್ನು ಜಾಗ್ರತೆ ಪಡಿಸುವದು ಒಂದು ಲೌಕಿಕ ವ್ಯವಹಾರಕ್ಕೆ ಸಾಧನೀಭೂತವಾದ ವಿಷಯಗಳನ್ನು ಕಲಿಸುವದು ಇನ್ನೊಂದು. ಗಣಿತ ಸಾಧನೆ, ಜ್ಯೋತಿಷ, ತರ್ಕನ್ಯಾಯ. ವೇದಾಂತಾದಿಗಳು ಮೊದಲನೆ ತರದ ವಿಷಯಗಳಾಗಿರುತ್ತವೆ. ಇವುಗಳಿಂದ ತನು ಮನಸ್ಸಿನ ಶಕ್ತಿಗಳು ಉತ್ಕೃಷ್ಟವಾಗುವದಕ್ಕೆ ಪ್ರಯೋಜನವಾಗುವವು. ವ್ಯವಹಾರಕ್ಕೆಲ್ಲ ಓದೋಣ, ಬರಿಯೋಣ, ಚಿತ್ರಕೋರಿಯೋಣ, ಗಾಯನ, ನರ್ತನಾದಿಗಳು ಯರಡನೇ ಜಾತಿ ವಿಷಯಗಳು. ಇವುಗಳ ಮುಖ್ಯೋಪಯೋಗವು ವ್ಯವಹಾರಕ್ಕೇನೆಂದರೆ. ಅದರ ಗಣಿತ, ಇತಿಹಾಸ, ಭೂ ವ-

ಗಾಗನೆ ಮೊದಲಾದವುಗಳು ಜಿರತಮಾತರದ ವಿಷಯಗಳೆಂ-
ದು ಹೇಳಬಹುದು. ಇವುಗಳ ಮೂಲತತ್ತ್ವಜ್ಞಾನವು ಪ್ರ-
ಚಾರಕ್ಕೆ ಸಾಕು. ಆದರೆ ವಿಶೇಷಜ್ಞಾನದಿಂದ ಮನೋವಿಚಾ-
ರಗಳು ಹೆಚ್ಚಾಗುವದಕ್ಕೆ ಬಹು ಪ್ರಯೋಜನವುಂಟಾಗುವ-
ದು. ಇದರಿಂದ ನಾವು ನಮ್ಮ ಶಾಲೆಗಳಲ್ಲಿ ಯಂಥಾ ವಿಷಯಗ-
ಳನ್ನು ಕಲಿಸುವದು ತಕ್ಕದ್ದಾಗಿರುತ್ತದೆ, ಯಾವ ಯಾವ ವಿಷ-
ಯಗಳನ್ನು ಎಷ್ಟು ಮಟ್ಟಿಗೆ ಕಲಿಸುವದು ಅವಶ್ಯಕವದೆ,
ಎಂಬದು ಸ್ಪಷ್ಟವಾಗುತ್ತದೆ.

ಶಿಕ್ಷಾಶಾಸ್ತ್ರವು ಶಿಕ್ಷಿಸಲ್ಪಡುವವರ ಪ್ರಕೃತಿಗುಣವನ್ನಾ-
ಶ್ರಯಿಸಿಕೊಂಡಿರಬೇಕು; ಹಾಗಂದರೆ ಅದು ಬೇರೆ ಬೇರೆ
ಮನೋಧರ್ಮಗಳು ಜಾಗ್ರತಿಪಡುವದಕ್ಕೆ ನಿಯಾಮಕನಿಂ-
ದ ವಿಧಿಸಲ್ಪಟ್ಟ ನಿಯಮಗಳನ್ನನುಸರಿಸಿ ಇರತಕ್ಕದ್ದು.
ಬೇರೆ ಬೇರೆ ಮನೋಭಾವಗಳು ಬೇರೆ ಬೇರೆ ಕಾಲಗಳಲ್ಲಿಯು,
ಬೇರೆ ಬೇರೆ ವಿಧವಾಗಿಯೂ ಪ್ರಕಟವಾಗುತ್ತವೆಂಬದು ಅನು-
ಭವದಿಂದ ತಿಳಿಯುತ್ತದೆ.

ಚಾತುರನಾದ ಶಿಕ್ಷಕನು ತನ್ನ ಶಿಷ್ಯರ ವಯಸ್ಸಿಗೆ, ಅಥ-
ವಾ ವಿಶೇಷವಾಗಿ ಅವರ ಮನೋವ್ಯಾಪಾರಗಳು ಉದ್ಭೂತ-
ವಾಗುವ ಪ್ರಕಾರಕ್ಕೆ ಅನು-ರೂಪವಾಗಿ ಶಿಕ್ಷಣಕ್ರಮವನ್ನು

ಯೋಜಿಸುವನು. ಇದಲ್ಲದೆ ಆ ವ್ಯಾಪಾರಗಳ ಜಾಗ್ರತೆಯ-
ವರ್ಧನಕ್ಕೆ ತಕ್ಕ ವಿಷಯಗಳನ್ನು ತಕ್ಕ ಮಟ್ಟಿಗೆ ಕಲಿಸುವದರ
ಬಗ್ಗೆ ಆಲೋಚಿಸುವರು. ಇದು ಅವನ ಕಲಿಸುವಾಗಿರುತ್ತದೆ.
ಹ್ಯಾಗಂದರೆ ತನ್ನ ಮುಂದಿರುವ ಕರ್ತವ್ಯವನ್ನು ಸ್ವತಃ ಆಲೋ-
ಚಿಸಿ, ಅವನು ಆ ವಿಷಯಗಳ ಅಭ್ಯಾಸಕ್ಕೆ ಹೆಚ್ಚಾಗಿ ಮ-
ಟ್ಟಿಕೊಳ್ಳುತ್ತಾನೆಂಬುದನ್ನು ಚನ್ನಾಗಿ ತಿಳಿದುಕೊಂಡು ಆ ವಿಷಯ
ಗಳನ್ನು ಆ ವಯಸ್ಸಿಗೆ ಯೋಗ್ಯವಾದ ಕ್ರಮದಿಂದಲೂ, ಪದ್ಧತಿ
ಯಿಂದಲೂ ಕಲಿಸಬೇಕೆಂಬ ತಾತ್ಪರ್ಯವು. ಪ್ರತಿಯೊಂದು ವರ್ಗ
ದ ಹುಡುಗನನ್ನು ಮುಂದೆ ನಿಲ್ಲಿಸಿಕೊಂಡು, ಚರಿತ್ರೆಗಳನ್ನು
ಕಲಿಯುವಲ್ಲಿ ಅವನ ಮನಸ್ಸು ಹೆಚ್ಚಾಗಿ ಬೆಳೆಯುತ್ತದೆಂದು ತಿ
ಳಿದಾಗ್ಯೂ ಅದನ್ನು ಲಕ್ಷಿಸದೆ, ಅವನಿಗೆ ಭೂಮಿತಿ ಸಿದ್ಧಾಂತಗಳ
ನ್ನು ಕಲಿಸತೊಡಗುವವನು ಬುದ್ಧಿಗೇಡಿಯಾದ ಶಿಕ್ಷಕನೆಂಬು-
ದು ಪ್ರತ್ಯಕ್ಷವೇ ಸರಿ. ಆದ್ದರಿಂದ ಶಿಕ್ಷಣದ ಪದ್ಧತಿಗಳನ್ನು ಯೋ-
ಜಿಸುವದೂ, ಅವುಗಳ ಮೂಲಾಧಾರಗಳನ್ನು ಶೋಧಿಸುವದೂ
ಶಿಕ್ಷಕನ ಮುಖ್ಯ ಕೆಲಸಗಳಾಗಿರುತ್ತವೆ.

ಬುದ್ಧಿವಂತನಾದ ಶಿಕ್ಷಕನು ತನ್ನ ಕಾರ್ಯವನ್ನು ನಡೆಸು
ವ ಪ್ರವೃತ್ತಿಯನ್ನು ನಿರ್ಣಯಿಸಿಕೊಳ್ಳುವದರ ಮೊದಲು ತನ್ನ ಶಿ
ಷ್ಯನ ಸ್ವಭಾವಗಳನ್ನೂ, ಗುಣಗಳನ್ನೂ, ಯೋಗ್ಯತೆಗಳನ್ನೂ,

ಅಭ್ಯಾಸಗಳನ್ನು ಆರೋಪಿಸುತ್ತಾನೆ. ಆನಂತರ ಇವರಿಗೆ ಏನು ಕಲಿಸಲಿ! ಹ್ಯಾಗೆ ಕಲಿಸಲಿ! ಎಂದು ಅವರನ್ನೇ ಕೇಳಿಕೊಳ್ಳುತ್ತಾನೆ. ಆದರೆ ಮನುಷ್ಯಸ್ವಭಾವವನ್ನು ತನ್ನಾಗಿ ತಿಳಿದುಕೊಳ್ಳದೆ, ಶಿಕ್ಷಣಕ್ಕೆ ಯೋಗ್ಯ ಮಾರ್ಗಗಳನ್ನು ಮನಮುಟ್ಟಿ ಅಭ್ಯಾಸಿಸದೆ ಇದ್ದವನು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಕೊಡುವದು ಸುಲಭವಲ್ಲ.

ಮಾನಸಶಾಸ್ತ್ರದಲ್ಲಿ ನಮಗಿರುವ ಅಜ್ಞಾನ ಮೂಲಕವಾಗಿ ಇದುವರೆಗೂ ಶಿಕ್ಷಣದ ಪದ್ಧತಿಗಳೂ ಕ್ರಮಗಳೂ ತಪ್ಪಾಗಿರುತ್ತಿದ್ದವು. ತರ್ಕಜ್ಞಾನ ಲಕ್ಷ್ಯಪೂರ್ವಕ ಪರಿಶೋಧನಗಳ ಶಕ್ತಿಯನ್ನು ಜಾಗ್ರತೆಪಡಿಸುವದಕ್ಕೆ ತಕ್ಕುದಾದ ಬೋಧನೆಯನ್ನು ಕೊಡುವದಕ್ಕೆ ಬದಲಾಗಿ ಬೇಸರಿಕೆ ಹುಟ್ಟುವಂಥ ರಸಶೂನ್ಯವಾದ ವಿಶೇಷ ವಿಷಯಗಳನ್ನು ತನ್ನ ಪ್ರಥಮವಯಸ್ಸಿನಲ್ಲಿ ಹಿಡಿಸುವದಕ್ಕಿಂತ ಹೆಚ್ಚು ಹೆಚ್ಚಾಗಿ ಕಲಿಸುವಂಥ ಶಿಕ್ಷಕನು ಬಾಲಕರ ಮನಸ್ಸಿನ ಅಭಿರುಚಿಯನ್ನು, ಯೋಗ್ಯತೆಯನ್ನೂ ಕುರಿತು ತನ್ನ ಪೂರ್ಣವಾದ ಅಜ್ಞಾನವನ್ನು ಪ್ರಕಟಿಸುತ್ತಾನೆ. ಕೆಲವರು ಬಹಳ ಬುದ್ಧಿವಂತರಾಗಿರುತ್ತಾರೆ, ಆದರೆ ಅವರ ಕಲಿಸುವಿಕೆಯು ಒಂದು ಕಾಸಿನ ಬೆಲೆಗಾದರೂ ಸರಿಯಾಗದ ಕಾರಣವೇನೆಂದರೆ, ಅಂಥವರು ತಮ್ಮ

ಶಬ್ದದ ಜ್ಞಾನಶಕ್ತಿಯನ್ನು, ಮನಸ್ಸಿನ ಪ್ರೀತಿಯನ್ನೂ ಲಕ್ಷಿಸ-
ದೆ ತಮ್ಮಂತೆ ಅವರಿಗೂ ಆ ಶಕ್ತಿಯೂ, ಪ್ರೀತಿಯೂ ಉಂಟೆಂ-
ದು ಭಾವಿಸಿಕೊಂಡು ಕಲಕಲವಮಹದ್ಗ್ರಹೂ ಸಿದಷ್ಟಂದಿ ಮನ-
ಸ್ಸಿಗೆ ಬಂದತ್ತೆ ಹೇಳುತ್ತಾ ನಡಿಯುತ್ತಾರೆ; ಅದರಿಂದ ಬಾಲಕ-
ರ ಮನಸ್ಸು ಕಗ್ಗತ್ತಲಲ್ಲಿ ಬಿದ್ದುಹೋಗುವುದಲ್ಲದೆ ಹೊರ್ತು ಅ-
ವರಿಗೆ ಲಾಭವೇನು ಉಂಟಾಗುವದಿಲ್ಲ.

---

*Canarese Grammer.*

## ವ್ಯಾಕರಣವನ್ನು ಕುರಿತು.

ಸ್ವಭಾಷೆಯ ಮೂಲತತ್ವಜ್ಞಾನವನ್ನು ಪಡೆದುಕೊಳ್ಳು-
ವರು, ಅಂದರೆ ತಮ್ಮ ಭಾಷೆಯ ವ್ಯಾಕರಣವನ್ನು ಚನ್ನಾಗಿ-
ಅಭ್ಯಾಸಿಸಿ, ಅದರ ಸಹಾಯದಿಂದ ತಮ್ಮ ಭಾಷೆಯನ್ನು ತಿ-
ದ್ದಿಕೊಳ್ಳುವರು ಯೇನಾದರೂ ವಿದ್ಯಾಭ್ಯಾಸ ಮಾಡಬೇಕೆಂ-
ಬ ಅಪೇಕ್ಷೆಯುಳ್ಳ ಯಾವತ್ತು ಜನರಿಗೆ ಅತ್ಯವಶ್ಯಕವಾಗಿರು-
ತ್ತದೆ. ಅದಾಗಿ ಕೆಳಗಿನ ಸಂಚಿಕೆಯಲ್ಲಿ ವಿವರಿಸಿ ಬರೆದಿರು-
ತ್ತದೆ. ಇನ್ನು ಪರರಿಗೆ ವಿದ್ಯಾಭ್ಯಾಸ ಮಾಡಿಸುವಂಥ
ಉಪಾಧ್ಯಾಯರುಗಳು ಶಬ್ದಜ್ಞಾನವನ್ನು ಸಂಪಾದಿಸಿಕೊಳ್ಳುವದು
ಎಷ್ಟು ನಾವಶ್ಯವಾಗಿರುತ್ತದೆಂಬುದು ಪ್ರಶ್ನವೇನಿದೆ.

ಆದರೆ ನಮ್ಮ ಕನ್ನಡ ಮಾಸ್ತರ ಜನರು ಕ್ರೂರವಿಷಯವಾಗಿಯು.
ಕ್ರೈಸ್ತ ದಿಕ್ಷರಿಂದ ಅವರು ಬರೆದ ಪತ್ರಗಳು ಹೊತ್ತು ಅವರ
ಪ್ರಶ್ನೆಗರಿಯಾಗುತ್ತವೆಂಬದನ್ನು ಕುರಿತು ನಾವು ಆದೇಶ
ಬರೆಯುತ್ತ ಬರೆದದ್ದುಂಟು.

ಆದದರಿಂದ ಕಂನಡ ವ್ಯಾಕರಣವನ್ನು ಕುರಿತು ನಮ್ಮ ಆ-
ಲೋಚನೆಗಳನ್ನು ಕ್ರಮಕ್ರಮೇಣ ಮುಖಾಂತರವಾಗಿ ಪ್ರಸಿದ್ಧಿ
ಪಡಿಸಲಕೇಳುತ್ತೇವೆ. ಆದರೆ ಕ್ಕಿನಿರುವ ವ್ಯಾಕ-
ರಣ ಪುಸ್ತಕಗಳನ್ನು ಬಿಟ್ಟು ಈ ವಿಷಯವನ್ನು ಪ್ರತ್ಯೇಕವಾ-
ಗಿ ಸ್ವತಂತ್ರ ಆಲೋಚನೆಗಳಿಂದಲೇ ಮೊದಲನಿಂದ ಬರೆಯುವ
ದಕ್ಕಿಂತ ವಿದ್ಯಮಾನ ಪುಸ್ತಕಗಳಲ್ಲಿ ಸರಸಾಗಿಯೂ, ಹೆ-
ಚ್ಚು ಪ್ರಯೋಜನಕರವಾಗಿಯೂ ಇರುವಂಥಾದ್ದನ್ನು ಶೋ-
ಧಿಸಿ ಗದುಕೊಂಡು ಅದರಲ್ಲಿರುವ ವಿಷಯಾನುಸಂಧಾನ-
ಸ್ವಾಧಿಕ್ಯ, ಶುದ್ಧಾಶುದ್ಧ ಮೊದಲಾದವುಗಳನ್ನು ಕುರಿತು
ಟಿಪ್ಪಣಿ ಬರೆದರಿಂದ ಹೆಚ್ಚು ಲಾಭ ಉಂಟಾಗುವದೆಂದು
ನೆನಸುತ್ತೇವೆ. ಹೊಸ ಪ್ರಕರಣಗಳಲ್ಲಿ ಇಂಥಾ ತರದ
ಪುಸ್ತಕವು ಶಾಲಾವ್ಯಾಕರಣ ಒಂದಲ್ಲದಿನ್ನೊಂದು ಕಾಣು
ವದಿಲ್ಲ. ಇದು ಈಗಿರುವ ಎಲ್ಲಾ ಪುಸ್ತಕಗಳಲ್ಲಿ ಸರಸಾ-
ಗಿದ್ದದ್ದು ನಿಃಸಂದೇಹವು. ಆದರೆ ಇದರಲ್ಲಿ ಸಹ-

ಆಲೋಚನಾತತ್ತ್ವಗಳು ಅನೇಕವುಂಟು.

ಈ ಶಾಲಾವ್ಯಾಕರಣಗ್ರಂಥದಲ್ಲಿ ಸಂಜ್ಞಾಪ್ರಕರಣವುಂಟು. ಅದರಲ್ಲಿ ಅಕ್ಷರಸಂಜ್ಞೆಗಳು ವಿವರಿಸಲ್ಪಟ್ಟವೆ. ಆದರೆ ಈ ಸಂಜ್ಞಾಪ್ರಕರಣದಲ್ಲಿ ಅಕ್ಷರಗಳನ್ನು ಮಾತ್ರವೇ ವರ್ಗಿಸುವುದು ತಕ್ಕದ್ದಾಗಿರುತ್ತದೆಂಬುದಾಗಿಯೂ, ಆ "ಅಕ್ಷರವಿಚಾರ" ಸಹ ಸಮರ್ಪಕವಾಗಿರುತ್ತದೆಂಬುದಾಗಿಯೂ ನಾವು ಸಂಮತಿಪಡಲಾರೆವು.

ವ್ಯಾಕರಣವೇ ಮೊದಲು ಸಂಜ್ಞಾಶಾಸ್ತ್ರವು. ಅನಾದಿಯಿಂದವುಂಟಾದ ಭಾಷೆಯ ರೂಢಿಗಳನ್ನು ಶಬ್ದಗಳನ್ನೂ ಆಲೋಚಿಸಿ, ಸಜಾತೀಯಗಳನ್ನು ಬೇರೆ ಬೇರೆ ವರ್ಗಗಳಾಗಿ ವಿಭಾಗಿಸಿ, ಆಯಾ ವರ್ಗಗಳಿಗೆ ತಕ್ಕ ಸಂಜ್ಞೆಗಳನ್ನು ಕೊಡುವುದೇ ವ್ಯಾಕರಣದ ಮುಖ್ಯಕರ್ತವ್ಯವು. ಆದರಿಂದ ವ್ಯಾಕರಣಕರ್ತನು ತನ್ನ ಗ್ರಂಥದಲ್ಲಿ ಬುತದಿಂದ ನಾನಾ-ಮುಖ್ಯಸಂಜ್ಞೆಗಳನ್ನೇ ಬಳಸುವನಷ್ಟೇ. ಆದರೆ ಈ ಸಂಜ್ಞೆಗಳಲ್ಲಿ ಮುಖ್ಯಸಂಜ್ಞೆಗಳೂ, ಸಹಾಯಕಸಂಜ್ಞೆಗಳೂ ಎಂದು ಎರಡು ವಿಧವು. ಭಾಷೆಯ ಪ್ರವೃತ್ತಿಗೆ ಸಾಕ್ಷಾತ್ಸಂಬಂಧವಾಗಿರುವ ಸಂಜ್ಞೆಗಳೆಂದರೆ ವರ್ಣ, ಅಕ್ಷರ, ಸ್ವರ, ವ್ಯಂಜನ, ನಾಮ, ಸರ್ವನಾಮ, ಕ್ರಿಯಾಪದ.

ಮೊದಲಾದವುಗಳು ಮುಖ್ಯಸಂಜ್ಞೆಗಳಾಗಿರುತ್ತವೆ. ಇವು ಗಳನ್ನು ವಿವರಿಸುವುದೇ ವ್ಯಾಕರಣವು (ವಿ, ವಿಶೇಷವಾಗಿ + ಆ, ಮರ್ಯಾದೆ + ಕರಣ, ಮಾಡೋಣ) ಆದಕಾರಣ ಮುಖ್ಯಸಂಜ್ಞೆಗಳನ್ನು ಸ್ಪಷ್ಟಪಡಿಸುವುದಕ್ಕಾಗಿಯೂ, ಬರೆಯುವ ಶಬ್ದಗಳು ಶುದ್ಧಸ್ವರವಾಗಿಯೂ ಮಾತಾಡುವುದಕ್ಕೂ ಕೆಲವು ಸಂಜ್ಞೆಗಳುಂಟು, ಅವುಗಳಿಗೆ ಸಹಾಯಕ ಸಂಜ್ಞೆಗಳೆಂದನ್ನಬಹುದು. ಅವು ಯಾವುವೆಂದರೆ, ಸಂಧಿ, ಲೋಪ, ಆಗಮ, ಆದೇಶ, ಪ್ರಕೃತಿ, ಪ್ರತ್ಯಯ, ಇವೇ ಮೊದಲಾದವುಗಳೇ. ಈ ಸಂಜ್ಞೆಗಳನ್ನು ಮಾಡದೆ ಹೋದರೆ ಭಾಷೆಯ ಪ್ರವೃತ್ತಿಗೆ ಶುದ್ಧಿಯುಂಟಾಗಲಾರದು. ಇನ್ನು ವ್ಯಾಕರಣದ ಆರಂಭದಲ್ಲಿ ಇರತಕ್ಕ ಸಂಜ್ಞಾಪ್ರಕರಣದೊಳಗೆ ಯಾವ ವಿಧದ ಸಂಜ್ಞೆಗಳು ಪರಿಗಣಿತವಾಗುತ್ತವೆಂಬುದು ವ್ಯಕ್ತವದೆ—ಸಹಾಯಕ ಸಂಜ್ಞೆಗಳಿಗೋಸ್ಕರ ಸಂಜ್ಞಾಪ್ರಕರಣವು. ಆದರಿಂದಲೂ ಸಂಜ್ಞಾಪ್ರಕರಣದಲ್ಲಿ ಮುಂದೆ ವಿವರಿಸಿರುವ ಸಂಧಿ ಮೊದಲಾದವುಗಳ ಲಕ್ಷಣಗಳನ್ನು ಶೋಧಿಸದೆ ಕೇವಲ ಅಕ್ಷರಗಳನ್ನು ಕುರಿತು ಮಾತ್ರ ಬರೆಯುವುದು ಅಯುಕ್ತವೆಂದು ನಮ್ಮ ಅಭಿಪ್ರಾಯವು-

(ಮುಂದಕ್ಕೆ ಸಾಗುವುದು.) ಕೃ.

*Notification*

# जाहिरात.

दक्षिणभागांतील डिपुटी व असिस्टंट डिपुटी इज्युकेशनल इन्स्पेक्टर व गांवठी शाळेचे हेडमास्तर यांस कळविण्यांत येते कीं.

या भागांत हाल्लीं जें मराठी दफ्तर आहे तें सर्व कानडींत असावें व पत्रव्यवहार कानडींत चालावा, असें ठरविण्यांत आलें आहे. याजकरितां मास्तर यांणीं आपलें दफ्तर कानडींत ठेवून वरिष्ट अंमलदार यांजकडे पाठविण्याचे कागदपत्र ही कानडींत पाठवित जावें. त्याप्रमाणें डिपुटी इन्स्पेक्टर यांणीं ही कानडींत काम चालवावें, परंतु दुसरा हुकूम होईपर्यंत इकडे पाठविणेचे ते कागद मात्र हाल्लीं प्रमाणेंच मराठींत पाठवित जावें. कळावें ता० २९ मार्च १८६६ इ॥ मुकाम होनावर जिल्हा कानडा.

W. A. Russell

इ० इ० द० भाग.

# *Notice.*

# ನೋಟಿಸು.

ಬೆಳಗಾವಿ ಜಿಲ್ಲೆಯಲ್ಲಿರುವ ಯಾವತ್ತು ಪಂತೋಜಿ ಗಳಿಗೆ.

ಈ ಸರಕುಲರ ನೋಟಿಸಿನಿಂದಾ ತಿಳಿಯಪಡಿಸುವದೇನಂದರೆ, ಪಂತೋಜಿಗಳನ್ನು ಒಂದೂರಿಂದ ಮತ್ತೊಂದೂರಿಗೆ ವರ್ಗಮಾಡಿದರೆ ಅವರು ಪುಸ್ತಕಂಗಳನ್ನು ತಮ್ಮ ತಯಾರಿ ಮಾಡಿಕೊಂಡು ನೇಮಿಸಿದ ಊರಿಗೆ ಹೋಗುವದನ್ನು ಬಿಟ್ಟು ನಮ್ಮ ಕಡಿಗೆ ತಾವು ಬಂದು ಅನೇಕ ತರಹದ ಸುಳ್ಳು ಕಳ್ಳತ್ರಾಕೆ ಯಿಲ್ಲದ ಸುಳ್ಳ ಮಜಕೂರಿನ ಅರ್ಜಗಳನ್ನು ಕಳಿಸುತ್ತಾರೆ. ಈ ಯತ್ನಗಳಿಂದ ಬಂದ ಸಂಕಟ ದೂರಾಗದ ಹಾಗಿರಪಕೆ, ಊರವರ ಕಡೆಯಿಂದ ಪಂತೋಜಿನ ನಮ್ಮ ಊರಲ್ಲಿ ಇಡವದಕ್ಕೆ ಮನಸ್ಸಂ ಅಗಬೇಕು. ಈ ಪಂತೋಜಿನ ಯಾಕ ಪನೆ ಕಡಿಗೆ ಬದಲಿ ಮಾಡಿದರೆ ನಂಮ ಹುಡುಗರ ಅಭ್ಯಾಸವೆಲ್ಲ ಗಾಗಲಿಬಿಲಿ ಎಂಬ ತೋರದಾದ ಮಜಕೂರಿನ ಅರ್ಜಿ ತಾವೇ ತಯಾರ ಮಾಡಿ ಅದರ ಕೆಳಗೆ ಗ್ರಾಮಸ್ಥರ ಸಹಿ ತೆಗೆದುಕೊಂಡು ನಮ್ಮ ಕಡೆಗೆ ಕಳಿಸುವ ಹಂಚಿಕೆ ಮಾಡುತ್ತಾರೆ, ಹೀಗೆ ಮಾಡುವದು ಬಾಳ ಗೈರು. ಆದರೆ ಪಂತೋಜಿಗಳ ಬದಲಿ ಆದರೂ

ವರೆ ಯಾವ ಪುಸ್ತಕಗಳು ಬರಲು ಆಗುವವು ಅವುಗಳಿಗೆ ಹೊ-

ಸ ಅಚ್ಚಿನ ಪುಸ್ತಕದ ಕ್ರಯ ತೃಪ್ತಿ ಮಾಡಲಿಕ್ಕೆ. ತಾರೀಖು

೨ ಮಾರ್ಚ ೧೮೭೭ ಇಸವಿ. ಮುಕ್ಕಾಮ ಅಥಣಿ.

Chunbassappa B. Dharwar.

ಡೆ. ಎ. ಇನಸ್ಪೆಕ್ಟರ ಜಿಲ್ಲಾ ಬೆಳಗಾವ.

---

## Notice.

## ನೋಟಿಸು.

ಬೆಳಗಾವಿ ಜಿಲ್ಲೆಯೊಳಗಿರುವ ಯಾವತ್ತು ಪಂತೋ-

ಜಿಗಳಿಗೆ.

ಈ ನೋಟಿಸಿನಿಂದ ತಿಳಿಯಪಡಿಸುವದೇನಂದರೆ, ನಾವು

ಪಾಲಕರ ಶಿಕ್ಷೆಗೆ ಗುರು ಶಾಲೆ ಬೋಧಿಸುವಲ್ಲಿ ಪಂತೋ-

ಜಿಗಳಿಗೆ ಯಾರಾದರೂ ಕೇಳಿದರೆ ಅವರು ನಮಗೆ ಅರುಹಬೇಕು

ವದಿಲ್ಲಾ ಅಥವಾ ನಾವು ಅವನ ಮರೆತವು ಎಂದು ಹೇಳು-

ವ್ರಿ. ಇದು ಅವರಿಗೆ ಅತಿ ಅಯೋಗ್ಯವು.

ಪಂತೋಜಿಗಳು ಮನಿಯಲ್ಲಿ ಶಾಲಿಗೆ ಅಭ್ಯಾಸ

ಮಾಡಿಸಬೇಕು. ಅವರಿಗೆ ಲಕ್ಷ್ಯ ಕೊಡುವದು ಅಲಕ್ಷ್ಯ.

ಬರುವವರು ಹೀಗೆ ಮೇಲನೀತ ಮಾಡದ ಪಂತೋಜಿಗಳು

ಸಂಮಸ್ತರಿಗೆ ಬಿದ್ದರೆ ಅವರ ವಿಷಯಕ್ಕೆ ನಮ್ಮ ಮನಸ್ಸಿಗೆ ಬಂದಂತೆ ನಾವು ತಜವಿಜಯಂನು ನಡಿಸುವೆವು.

ಲಾವು ಬಡುಕಾರಣೆಂದ ಮತ್ತು ಬಹುದಾರಿಯಿಂದ ಕೆಲಸ ನಡಿಸುವವರು ಎಂದು ನಮಗೆ ತೋರಿಸಿದರೆ. ಬಹುಷ್ಟ ಮನಸ್ಸಿನಿಂದ ಕೆಲವು ಜಂತೋಜಿಗಳು ತಮ್ಮ ಸ್ಥಿದಿನ ಚರಿತ್ರೆಯು ಸ್ವತಮ್ಮ ಬಾಯಿಂದವಂದು ಮುಂದೆ ವರ್ಗನೆ ಮಾಡಿ ಬರೆಸಿ ತೋರಿಸಬೇಕು ವಂತ ಕಾಗುತ್ತಾರೆ. ಇಂಥವರನ್ನು ನೋಡಿ ನಮಗೆ ಹಿಚ್ಚು ಮತ್ತು ನಗೆಯು ಕೂಡಾ ಬರುತ್ತಾವೆ. ಅದಕೆ ಸ್ವಂತ ಶ್ರಮದಿಂದ ತಮ್ಮ ಅಭ್ಯಾಸವಂನು ಹೆಚ್ಚಿಸುವವರಿಗೆ ಯೇನಾದರೂ ಪ್ರಯೋಜನವಾಗುವದಲ್ಲದೆ ಗ್ರಂಥಾದುಷ್ಟ ಮೂಕ್ತಸ್ತುತಿ ಕಳ್ಳಂದ ನಾಶಮಾತ್ರವಾಗುವದು. ತಾ॥ ೨೬ ಮಾರ್ಚ ಮುಕ್ಕಾಂ ಕೋರಟನ್ಯಾಯ.

*Chunbussappa B. Dharwar*

ದಿಂನಾಂನಾಂ ಜಿಲ್ಲಾ ಬೆಳಗಾವ.

---

*Notice*

**ನೋಟಿಸು.**

ಬೆಳಗಾವಿ ಮತ್ತು ಕಾನಡಾ ಯಿಕೆ ರೆಡು ಜಿಲ್ಲೆಗಳ-

ಲ್ಲರುವ ಯಾವತ್ತು ಹಿಂದೂ ಜನಗಳಿಗೆ ತಿಳಿಯ ಪಡಿಸುವದೇ
ನಂದರೆ, ಹುಡುಗರದಿಯಿಂದ ಸಾಪ್ ಯಿಸನೂತ ಮಾಫ
ಮಂತ್ರಿ ಅವರಿಗೆ ನಾವು ದಾಖಲ ಮಾಡಿದೆಂ ಮುಬದಲ ಮರವಲ್ಲಿ
ಸ್ಥಳಕ್ಕೆ ಹೋಗಿ ಅಲ್ಲಿಗೆ ಹೋಕ್ಕು ಹೋಗುವ ಮುಂದೆ ಹುಡುಗರ
ಗೆ ನಾವು ಮಾಫ ಯಿಸ್ವರುಂದು ಬರುವ ಹಿಂದೂ ಜನಗಳಿಗೆ
ಹೇಳಿದ್ದೇವೆ, ಹೆಳಕ್ಕ ನಮ್ಮ ಸಜನರ ಬತ್ತ್ರ ಹಾವಹಿರಾಯ
ಬಾಹಳ್ಗಸ್ತಿದೆ. ಇಂಥವರ ಮೇಲೆ ಸರಕಾರಿ ಬಟ್ಟೆ ಜಯಾರ ಅ
ಸುವದಕ್ಕೆ ಅವಕಾಶಯಿಲ್ಲ. ಹೀಗಿಂತು ಹುಗನಮುಗೆಸಬಲ
ಸಾಕ್ಷಿ ಗಳು ಸಿಗದಕಾರಣ ನಾವು ಇದರ ಕಡಿಗೆ ದುರ್ಲಕ್ಷ ಮಾ
ಡುತ್ತೇವೆ. ಆದರೆ ಯಿಂಥಾ ಅಪರಾಧಗಳನ್ನು ಮಾಡಿದವ
ರನ್ನು ಮಗೆ ಸಿಕ್ಕರೆ ನಾವು ಅವರ ಬಗ್ಗೆ ಯಾತ್ರೆ ತಕ್ಕ ತಜವೀಜ
ಮಾಡುವೆವು. ತಾ|| ೩ ಮಾರ್ಚ ೧೮... ಯಿಸವಿ ಮುಕ್ಕಾ
ಮ ಮುಶೀರ್ಗಾವೆ.

*Chunbussappa B. Dharwar.*

ಡಿ. ಇಂ. ಇಂ. ಜಿಲ್ಹಾ ಬೆಳಗಾವ.

---

## *Notice.*

## ನೋಟಿಸು.

ಬೆಳಗಾವಿ ಮತ್ತು ಉತ್ತರಕಾನಡಾ ಈ ಎರಡು ಜಿಲ್ಹೆ
ಗಳಲ್ಲಿರುವ ಯಾವತ್ತು ಪಂತೋಜಿಗಳಿಗೆ ಕಮೋಟಿಸಿ ನಿಂ
ದ ತಿಳಿಸುವದೇನಂದರೆ, ಕೆಲವು ಪಂತೋಜಿಗಳು-
ತಂಮ ರಿಜಿಸ್ತರ ಬುಕ್ಕಿನಲ್ಲಿ ೪ ಅಥವಾ ೫ ಕಲಮುಗಳ ಹೆಸರು
ಗಳನ್ನು ಬರೆದಿರುತ್ತಾರೆ. ಪರಂತು ಪರೀಕ್ಷಾ ರೀತಿಗಳು ಕೊಟ್ಟಿರುವ
ಮುಖದಲ್ಲಿ ೧೦ ಅಥವಾ ೧೧ ಕಲಮುಗಳು ಹಾಜರು ಇರು-
ತ್ತವೆ. ಹೀಗಿರುವ ಕಾರಣವನ್ನು ತಿಳಿದರೆ ಪಂತೋಜಿಗಳು
ಕಲಂಗಳ ಕೊಡುತ್ತಾರೆ. ಅದರಿಂದ ಇವರು ಬರೆದ ರಿಜ
ಸ್ತರ ಬುಕ್ಕಿನ ಮೇಲಿಂದ ಇವರಕ್ಕೆ ಸ್ವಲ್ಪ ಸಂಶಯ ಬರುತ್ತ
ದೆ. ಆದಕಾರಣ ಪಂತೋಜಿಗಳು ಈ ಸಂಶಯ ದೂರ ಆಗುವದಕ್ಕಾ
ಗಿ ಮುಂದೆ ನಡಕೊಳ್ಳಬೇಕು. ತಾ॥ ೨೧ ಮಾರ್ಚ ಸನ ೧೮೭೭
ಮುಕ್ಕಾಮು ಧಾರವಾಡ.

*Chunbussappa B. Dharwar*

ಡಿ. ಇ. ಇ. ಜಿಲ್ಹಾ ಬೆಳಗಾವ.

---

*Notification.*

# जाहिरात.

धारवाड जिल्ह्यांतील सर्व स्कुलमास्तर लोकांस क-

आहेकीं.

कसबा आलूर तालुके हानगल येथील नाशीकुल मास्तर हणमंत बापूराव मोंगल हे इकडील हुकुम घेतां शाळा सोडून दोन तीन वेळां गैरहजर झाले हा गैरशिस्त प्रकार मेहरबान इन्स्पेक्टर साहेब बहादूर दक्षिणभाग यांचे नजरेस आणून सदर मास्तर यांस त्या खात्यांतून कमी करण्यांत आलें आहे.

वरील मजकूर वांचून आमचे ताब्यांतील सर्व मास्तर लोक आपली वर्तणूक वरिष्ठ अधिकारी व ग्रामस्थलोकांस पसंत पडण्या जोगी खबरदारी ठेवितील अशी आशा आहे. ता० २१ मार्च १८६९. मु॥ कर्जगी.

*Nagesh Vinayek Bapat*

डि० इ० इ० जि० धारवाड.

---

*Notification.*

# जाहिरात

धारवाड जिल्ह्यांतील सरकारी शाळांचे मास्तरांस.

१ प्रत्येक शाळेस सालोसाल नेमणुकी खर्च आहे त्यांतून

बहुतेक मास्तर गेरवाजवी खर्चांच्या बाबी आपले चित्तां त नमुद करितात त्याखालीं लिहिल्या प्रमाणें.

१ (निळी व तांबडी शाई) चूक दुरुस्ती करितांनां ह्या शाईचा क्वचित् स्थळीं उपयोग करावा लागतो. परंतु काळी शाई असून हीं निळ्या शाईचा उपयोग कां करितात हें समजत नाहीं.

२ (फुलिस्केप कागद) आह्मां शिवाय इतराकडे पत्रव्यवहार चालविण्याचा मास्तर लोकांस थोडाच प्रसंग येत असेल. कदाचित् बाहेर पत्रें पाठविणें झाल्यास फुलिस्केप कागदांचा उपयोग करित असतील असें आह्मांस वाटत नाहीं. कारण आह्मांकडे जीं कागद पत्रें येतात तीं सर्व फ्रेंच कागदावरच असतात.

३ (स्याव केरसुण्या) दरमहा खरेदी करून पुनः दुसऱ्या महिन्यास शिलक राहत नसती ल असें वाटत नाहीं.

४ (वेत छडया) या, दरमहा तीन अगर चार आण्याच्या नमुद असतात. याज वरून शिक्षच्या

घडया मुलांच्या पाठीवर फुटतात असें उघड दिसून येतें. मुलांस न मारतां युक्तीनें शिकविण्या विषींचा हुकूम अमलांत न आणल्याचें प्रत्यंतर दुसरें पाहण्याचीजरूर राहिलीनाहीं. ज्या मास्तरांचे बिलांत घडया नमूद असतील त्यांजला त्याच आधारानें विचारल्यास जबाब द्यावालागेल.

५ (ब्लाटिंगपेपरष पेनवंडल) जिल्यानींहा व तीन अगर चारशाळा शिवाय करून कालडी मराठी लिहितांना, या दोन्ही जिनसांचा उपयोग होत असेल असें आह्मांस वाटत नाहीं. याची खा श्री आह्मी शाळांचे परीक्षेस गेल्यावेळीं जाहली आहे. खरोखर खरेरी करीत असतील, तर कोणतेही शाळेंत परीक्षेच्या वेळेस मागितल्या वेळीं मास्तरांचे दप्तरीं कां मिळूं नयेत!

यावरून नेमणुकी सारीलवार खर्चास कसातरी मेळ घालून बिलें पाठवितात असा उघड संशय येतो. तर या पुढें बाजवी जितका खर्च होईल तितकाच राखवू

न बाकी रकम शिलकेंत अमानत राखल्यास हें विनजा
वी. सामान दुरुस्तीकडे एक रुपया पासून पांच रुपये
पर्यंत खर्च झाल्यास त्यापैकीं इकडील मंजुरीनें ख
र्च करण्याची वहिवाट राहावी.

२ बरेच मास्तरांकडून यदहुकूमाप्रमाणें सालीना बारख
र्चीचीं बिलें येत नाहींत. यापुढें अशी कसूरी दिसून आ
ल्यास दुर्लक्ष करणारास दंड करावा लागेल.

येणें प्रमाणें मजकूर ध्यानीं आणून वहिवाट ठेवावी. क०
ता० २३ मार्च १८६६. मु॥ कलगी.

*Nagesh Vinayck Rajun*

डि० इ० इ० जिल्हा धारवाड.

---

*Notification*

## जाहिरात.

कानडा जिल्ह्या पैकीं कसबा यल्लापूर तालुके म-
जकूर येथील स्कुलमास्तर माहारुद्र गिरीयप्पा हे विन
हुकूमानें २५ दिवस गैरहजर असून हजर असल्या प्र
माणें चोपडींत मुलांची हजरी भरलेली होती ही गुन्ह

तपासणीचे वेळीं मे॰ एज्युकेशनल इन्स्पेक्टर सा॰ बाहदूर दक्षिण भाग यांचे नजरेंत येऊन साहेब मह सूफ याणीं सदरी मास्तरास एक महिन्याचा पगार (२८ रुपये) दंड करून असा अपराध पुनः पंतोजी मजकुर यांजकडून घडेल तर त्यांस शाळा खात्यांतून काढून टाकावा, असा ठराव केला आहे. हें उदाहरण सर्व पंतोजी लोक लक्षांत ठेवतील अशी उमेद आहे. ता॰ १६ मार्च बेळगांव.

*Appajee Babooraw.*

अ॰ डि॰ ए॰ इन्स्पेक्टर कानडा.

---

*Normal Students ready for employment*

[illegible]
[illegible]
[illegible]
[illegible]
[illegible]
[illegible]

| ಹೆಸರು | ಇರೂವೂರು | ಜಾತಿ | ವಯಸ್ಸು | ಕಲ್ಲದವರಿಸ್ತೆಯಲ್ಲಿ ಇರುವ ದಿನಗಳು | ಯಾವ ವರ್ಗದ ಅಭ್ಯಾಸ | ವರ್ಣನೆ |
|---|---|---|---|---|---|---|
| ೧ ಕೃಷ್ಣಾಜೀ ನಿಂಬಾಜೀರಾವ. | ಹುಕ್ಕೇರಿ. | ಬ್ರಾಮ್ಹಣ | ೧೮ | ೧೫೩ | ೧ | ಮುಖ್ಯಮಾಸ್ತರನಾಗಬಹುದು |
| ೨ ಅಣ್ಣಾಜೀ ನಾರಾಯಣ. | ನರಗುಂದ. | ” | ” | ೧೪೭ | ” | ” |
| ೩ ಕೃಷ್ಣಾಜೀ ರಾಮಚಂದ್ರ. | ಶಿರಸಂಗಿ | ” | ೧೭ | ೧೩೧ | ” | ” |
| ೪ ಗೋವಿಂದ ಗೋಪಿನಾಥ | ಬೆಳಗಾವಿ. | ” | ” | ೧೩೦ | ” | ಚಿಕ್ಕವ, ಅಶಕ್ತ, ಉಪಸ್ಥಾಯಿನಾಗಬಹುದು |
| ೫ ಬಾಳಾಜೀ ಅಣ್ಣಾಜೀ. | ಶಾಹಪೂರ. | ” | ” | ೯೮ | ೨ | ” |
| ೬ ಯೋಗೇಶ್ವರ ಗೋವಿಂದದೇವ. | ಅಬ್ಬಿಗೇರಿ. | ” | ೧೮ | ೧೧೬ | ೧ | ಮುಖ್ಯಮಾಸ್ತರನಾಗಬಹುದು. |
| ೭ ಸಿದ್ದಪ್ಪಾ ಶಿವಪ್ಪಾ | ಬೈಲಹೊಂಗಲ. | ಲಿಂಗಾಯತ | ” | ೧೧೭ | ” | ” |
| ೮ ಹಸನ ದಾವೂದ. | ಬೆಳಗಾವಿ. | ಮುಸಲಮಾನ | ೨೦ | ೧೧೪ | ” | ” |

| | | | | | | |
|---|---|---|---|---|---|---|
| ೯ ಚೆನ್ನಯ್ಯಾ ಶಿವರುದ್ರ. | ಬ್ಯಾಲಹೊಂಗಲ | ಲಿಂಗಾಯತ | ೧೫ | ೧೧೧ | ೧ | ಅಕ್ಕಿವ, ಅಸಿಸ್ಟಂಟ ನಾಗಬಕ್ಕರ |
| ೧೦ ಅಡಿವೆಪ್ಪಾ ಶಿವಲಿಂಗಯ್ಯಾ | " | " | " | ೧೦೭ | " | ಅಸಿಸ್ಟಂಟಕಾರ |
| ೧೧ ಗೋಪಾಳ ಗೋವಿಂದ. | ಉದಗಾವ. | ಬ್ರಾಂ | ೧೯ | ೯೧ | ೨ | " |
| ೧೨ ವೆಂಕಾಜಿ ಗೋವಿಂದ. | ನವಲಗುಂದ. | ಬ್ರಾಂ | " | ಸ್ವರ್ಕಾಜರು | ೧ | ಮುಖ್ಯಮಾಸ್ತರ. |
| ೧೩ ದತ್ತಾತ್ರಯ ಭಾವೂ. | ನರಗುಂದ. | " | " | ೯೫ | ೨ | ಅಸಿಸ್ಟಂಟ. |
| ೧೪ ಅಂದಾನೆಪ್ಪ ಶಿವರುದ್ರ | ಸಂಗೋಳ್ಳಿ. | ಲಿಂಗಾಯತ | " | ೩೫ | " | " |
| ೧೫ ಮಲ್ಲಪ್ಪಾ ಈಶ್ವರಪ್ಪಾ. | " | ಜೈನ | ೧೫ | ೪೭ | " | " |
| ೧೬ ಬಾಳೂ ಮಲ್ಹಾರಿ... | " | ಮರಾಠಾ | " | ೨೫ | " | " |

**ಮೊದಲನೇ ವರ್ಗದ ಅಭ್ಯಾಸವು** - ಕನ್ನಡ, ಮಹಾತ್ಮ್ಯ ಓದೋಣ, ಬರಿಯೋಣ ಅಕ್ಷರಮಾಲಾ ವ್ಯಾಕರಣಗಳು ಸಹಾಸರಿ, ಇಂಗ್ಲಿಷ ಅಕ್ಷರಗಳು, ಭೂಗೋಲ ೩ ಖಂಡಗಳು, ಗಣಿತ ವಿಷಯ.

ರ್ಗಣಿತ ಮಿಶ್ರಗಣಿತ ಯುಕ್ತಿದ ಮೊದಲನೇ ಬುಕ್ಕಿನ ೧೦ ಸಿದ್ಧಾಂತಗಳು....

ಎರಡನೇ ವರ್ಗದವರ ಅಭ್ಯಾಸವು. ಕನ್ನಡ ಮಹಾಶಾಸ್ತ್ರ ಓದೋಣ, ಬರೆಯೋಣ, ಎರಡು ವ್ಯಾಕರಣಗಳು ಸಾರಾಸರಿ, ಇಂಗ್ಲಿಷ ಮೊದಲನೇ ಬುಕ್ಕು, ಭೂಗೋಲ ಎರಡು ಖಂಡಗಳು, ಅಂಕಗಣಿತ ಮುಗಿದು ಬೀಜಕ್ಕೆ ಪ್ರಾರಂಭ.

---

*Examination of Candidates.*

## ಹೊಸ ವಿದ್ಯಾರ್ಥಿಗಳ ಪರೀಕ್ಷೆ -

ಕಳೆದ ತಿಂಗಳ ೨೧ ನೇ ತಾರೀಖಿನಲ್ಲಿ ನಾರ್ಮಲ ಶಾಲೆಯಲ್ಲಿ ಹೊಸ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕಾಗಿ ಪರೀಕ್ಷೆಯಾಯಿತು. ಸುಮಾರು ೧೦೦ ಜನ ವಿದ್ಯಾರ್ಥಿಗಳು ಕೂಡಿದ್ದರು. ಅವರಲ್ಲಿ ಕಡಿಮೆ ವಯಸ್ಸಿನವರನ್ನೂ, [illegible] ಕಲಾಂಗಿದ್ದವರನ್ನು ಬಿಟ್ಟಾಗಿ ೬೭ ಜನರು ಪರೀಕ್ಷೆ ಕೊಟ್ಟರು. ಪರೀಕ್ಷೆಯ ವಿಷಯಗಳು- ಕನ್ನಡ ಮಹಾಶಾಸ್ತ್ರ ಓದೋಣ, ಬರೆಯೋಣ, ವ್ಯಾಕರಣ, ಭೂಗೋಲ, ಅಂಕಗಣಿತಗಳು. ಈ ವಿದ್ಯಾರ್ಥಿಗಳಲ್ಲಿ ರು ಕನ್ನಡ ವ್ಯಾಕರಣ [illegible]

ಯೇನು ಕಾರಣವಿಲ್ಲ. ಹೋದಿ, ಕೇಶವಾಯ ಯತಿಯಲ್ಲಪ್ರದಿಕರಣಿ
ಪ್ರಬಲವು ಮತ್ತು ಬಲದಿತ್ತು. ದಶಗ್ರಂಥಿಗಳೂ, ಜಪಾಪಾಠಗಳ
ನಪಾಠಗಳೂ ಕೇಶವಾಯ ಯಪೂರ್ವಕದಲ್ಲಿ ಯಾವ ಮೂರೆಕೇಂದ್ರದ
ತಿಳಿಯದು. ಆಕೃಷ್ಟ ರಾಜ್ಯದಲ್ಲಿ ತಮ್ಮಂಥದರ ಗೋನ್ನರ ದಣಸಾಕಿಯ
ಗುವದು ಕಂಡು ಯಿಲ್ಲರು ಪ್ರದಿಕರೆ ಜಗತೋಡಿದರು. ಆದರೆ ಜಗಮ-
ನಃ ಹೋದಿರಿ, ಆನಿವದಗ್ರಂಥಿಗಳ ಬಸ್ತಿಗಳಲ್ಲಿ ಮಾತ್ರ ಜಗಬಿಂಕಗ್ರಂ
ಥಿಗಳು ಯಾಕತಗ್ರಂಥಿಗಳು ನಿದರಾನುತ್ತಿವೆ.
ಅವರಮಕ್ಕಳು ಜಗತಂಮ ತಂಡಿಗಳಿಗೆ ನಗುತ್ತಾರೆ. ದಣಕಅರ್ಕಗೇಹಾಜ್ಞ
ಭ್ಯಾಸವಾಗುತ್ತಿಂಬದುಪ್ಪಪ್ಪವಲ್ಲವೇ! ಹುಡುಗರನ್ನು ಬಡಿದು ಕಂಡುವರ.
ತು ನನಗೂ ಧಾರ್ಗವಾದ ಮಾತು. ಆದರಿಂದ "ಬವತಿಲ್ಲದಿನದಶಿಬಂದಿ
ತ್ತಿ!" ಯೆಂಬ ಗಾದೆ ! ವ್ಯವಹಾರದಲ್ಲಿ ಉಂಟಾಯಿತು. ಆದರೆ ಯೇನು
ಕಾರಣಕ್ಕಿ ಹೂಡದೆ ಕಾಗುತ್ತವೆ! ತಮ್ಮ ಕೋಮಲವಾದ ದೇಹಕ್ಕೆ ತಾಗುವತಿ-
ಟ್ಟುಗಳಿಂದ [illegible] ನಕ್ಕಿಸ್ವಾಗುವದಿಲ್ಲವೋ! ಆಶಿಯಗಳಿಂತರಾವು
ಮಾತನ್ನ ಅಭ್ಯಾಸ ವೃದ್ಧಿ ಮಾಡುವರು ನವೆ. ದುರ್ಮಾನಾಶಿಪ್ಪುದ ನವದೆ ಅವ-
ರು ಕೆಟ್ಟಾಸ [illegible] ಗೋ! ಅದರೆ ಅವರಿಗೆ ಅಭ್ಯಾಸವು ಮಾಡುವರು!
ಅದಕ್ಕೆ ಅವರ ಮಪಮುಷ್ಟದು. ಮಾಡಿ! ಅದರಲ್ಲಿ ಅವರಿಗೆ ಆನಂದವಿಲ್ಲ.
ಯೇನು ಕಾರಣ? ಅದರಲ್ಲಿ ಅವರಿಗೆ ಯೇನು ತಿಳಿದಿರುವದಿಲ್ಲ. ಇದೂ
ದಶಿಕ್ಷಕರಿಗೆ [illegible] ಪಾತ್ರರೋ, ಅವರಿಗೆ ಸ್ತೃತಿಯೋ! ಯೆಂದು

ಬು. ಧಿ ಮ. ತರೇ ನಿತ್ಯಸಾಲ -

ಆದರೆ ಯೇನಾದರೂ ಒಂದು ಚಕ್ಕಂದದ ಆಟ ಹುಡುಗರಿಗೆ
ಆಸೆ ಬೇಕಾದರೆ ಯೇನೇನು ಆಯಾಸವಿಲ್ಲ, ಅವು ಬಹು ಪ್ರೀತಿಯಿಂದ
ಕಲಿಯುತ್ತವೆ. ಅದೇ ಪ್ರಕಾರ ಅವರು ಉಪಯುಕ್ತ ವಿಷಯಗಳನ್ನು ಕಲಿಯ
ದಿದ್ದರೆ, ಕಷ್ಟ ಕಲಿಸುವವರದು. ಆಟದಲ್ಲಿ ಯಾವ ಕಾರಣಕೋಸ್ಕರ ಅವರ
ನಷ್ಟ ಹರಣವಾಗುತ್ತದೋ, ಅದೇ ವಿದ್ಯಾಭ್ಯಾಸದಲ್ಲಿ ಕಂಡು ಬಂದರೆ ಆ ವಿ-
ದ್ಯಾಭ್ಯಾಸವೇ ಅವರಿಗೆ ಆಟವಾಗುವದು. ಹುಡುಗರಿಗೂ ವಿಷಯ
ಗಳನ್ನು ತಾವೇ ಹುಡುಕಿ ತೆಗೆಯ ಸಮರ್ಥರಾಗುವ ಹಾಗೆ ಅವರ
ಮೂಲದಾದ ವಿಚಾರಶಕ್ತಿಗಳಿಗೆ ಬಲ ಕೊಡುತ್ತ ಹೋದರೆ, ಆ ಅಭ್ಯಾಸ
ವ ಅವರಿಗೆ ಯಿಂದು ಸಂತೋಷವಾಗದೆ ಇರದು.

---

ವಿದ್ಯಾಸಾಧನದ ತತ್ತ್ವವಿಚಾರವು ೪ ಭಾಗಗಳಾಗಿ ವಿಭಾಗಿ
ಸಲ್ಪಡುತ್ತದೆ.

೧ ವಿದ್ಯಾಸಾಧನದ ವಸ್ತುಗಳು.

೨ ವಿಚಾರಶಕ್ತಿ ಸಾಧನೆಗಳ ಉದ್ಬೋಧನವು.

೩ ವಿದ್ಯಾಸಾಧನದ ಬೇರೆ ಬೇರೆ ರೀತಿಗಳಿಂದಲೂ ವಸ್ತುಗಳಿಂ
ದಲೂ ಆಗುವ ಲಾಭಗಳು.

೪ ಬೇರೆ ಬೇರೆ ವಿಧದ ವಿದ್ಯಾಭ್ಯಾಸದಲ್ಲಿ ಬೇರೆ ಬೇರೆ ರೀತಿಗ

ಸಿದ್ಧನಾಥ ವಾಚನ ಮಂದಿರ.
ಹೊರಬ. ಜಿ|| ಧಾರವಾಡ.

೪ನ್ನು, [illegible]

೧ ಶಾಲೆಯ ವ್ಯವಸ್ಥೆಯು ಆಯಿತು.

---

*The School Grammer.*

# ಶಾಲಾವ್ಯಾಕರಣ.

(ಹಿಂದಿನ ಸಂಚಿಕೆಯಿಂದ)

ಅಕ್ಷರವಿಚಾರವು ಸಮಂಜಸವಾಗಿರುವದಿಲ್ಲೆಂಬುದಕ್ಕೆ
೪ ನೇ ಪ್ರಶ್ನೋತ್ತರದಲ್ಲಿ ಅಕ್ಷರಗಳು ಬಂದು ಸ್ಥಾನದು ಹೂಡಿ
ಅಕ್ಷರಗಳಾಗುತ್ತವೆಂಬ ತಾತ್ಪರ್ಯವಿದ್ದರೆ ಸರಿಯಾಗುತ್ತಿತ್ತು ಆಗ
ರಗಳು ವ್ಯಂಜನಸ್ವರಗಳ ಸಂಯೋಗಗಳೇ ಹೊರತು ಬೇರೆ ಯೋಗ
ವಾಗಲಿ ತಾಕ್ಷರಗಳೂ, ಒತ್ತಕ್ಷರಗಳೂ ಮೂಲವರ್ಣಗಳಿಂದಲೇ ಉಂ
ಟಾಗಿ ಅವು ಆ ಮೂಲವರ್ಣಗಳಿಂದ ಕೇವಲ ಭಿನ್ನವಾದ ಚಿಹ್ನ
ತ ಹೇಳಕೂಡದು.

೧೩ನೇ ಪ್ರಶ್ನೋತ್ತರದಲ್ಲಿ "ಸಂಸ್ಕೃತವರ್ಣಮಾಲೆ ಅನು
ವಾಗಿ ಕನ್ನಡದಲ್ಲಿಯ ಉಪ್ಪು ವರ್ಣಗಳೆಂಟು ಮತ್ತೆ ಕೇವಲ ಅಬದ್ಧವಾ
ದೆ: ವ್ಯಾಕರಣಾಂಬುಧದಲ್ಲಿ ಮಹೇಶ್ವರಪ್ರೋಕ್ತ ಚತುರ್ದಶಸೂತ್ರ
ವರಿಸಿದ ವರ್ಣಗಳು ನಾಲ್ವತ್ತೇಳು ದರೆ ಅಲ್ಲದೆ ಇನ್ನು ಅ
ಊ, ಋೂ, ಎಂಬ ದೀರ್ಘಸ್ವರಗಳನ್ನು, (ಂ) ಅನುಸ್ವಾರ

ಸಗ, (೪೮) ಜಿಹ್ವಾಮೂಲೀಯ, (೪೯) ಉಪಧ್ಮಾನೀಯ ಎಂಬ-
ಂಗ ವಾದವುಗಳನ್ನು ಕೂಡಿಸಿದಾಗ್ಯೂ ೫೦ ಮಾತ್ರವಾಗುತ್ತವೆ. ಇನ್ನಿತರ
ಗಳೆಲ್ಲಿ?

ಋಕಾರವು ಸಂಸ್ಕೃತದಲ್ಲಿಯೂ, ಕನ್ನಡದಲ್ಲಿಯೂ, ಎಲ್ಲಿಯೂ
ತ್ತಿ ಸಮ್ಯಕ್ ಶಾಲಾ ವ್ಯಾಕರಣದ ಉಚ್ಚಾರಣೆಯ ಬಗ್ಗೆ ಕಂಡಿತಂಬ ಹಾಗಿದೆ
ವು ಬಿಂದಾಗ್ರಸ್ತವಾಗಿದ್ದಿಂದೆ.

ಕನ್ನಡವರ್ಣಮಾಲೆಯ ನಿಜವಾದ ಸಂಗತಿಯೇನೆಂದರೆ-ಹಿಂ
ದಿರುವ ಚತುರ್ದಶ ಸೂತ್ರಗಳಲ್ಲಿ ವಿವರಿಸಿದ್ದ ದೀರ್ಘಸ್ವರಗಳು
ಳು, ಯೋಗವಾಹಗಳೂ ಅನುಸ್ವಾರ ವಿಸರ್ಗಗಳೆಂಬ ಎರಡು, ಅಂತೂ ವರ್ಣ
ಸಹಿತವಾಗಿ ಚತುರ್ದಶ ಸೂತ್ರಗಳಲ್ಲಿ ತಿಳಿಸಿದ ೪೯ ವರ್ಣಾತ್ಮಕವಾದ
ಸ್ಕೃತ ವರ್ಣಮಾಲೆಯು ಕನ್ನಡದಲ್ಲಿ ವ್ಯವಹರಿಸುತ್ತದೆ. ಅದಕ್ಕೆ ಎ, ಒ
ಬ ಮೂರು ಹೊಸ ವರ್ಣಗಳು ಸೇರುತ್ತವೆ. ಅಂತು ಕನ್ನಡ ವರ್ಣಮಾಲೆ
ವರ್ಣಗಳುಳ್ಳದ್ದಾಗಿದೆ.

ಉಪಲಿಂಗ ಸೂತ್ರದಲ್ಲಿ ''ಸಂಧಿಯುಳ್ಳ ದಕ್ಷರಗಳಾದಿಯಲ್ಲಿ
ಹ, ಉ, ಊಕಾರಗಳ ಉಚ್ಚಾರಣೆ ಶುದ್ಧಸ್ವರಗಳ ಉಚ್ಚಾರಣೆಗಿಂತ
ರಣ ಅಕ್ಷರಗಳನ್ನು ಶಬ್ದದಲ್ಲಿ ಯು, ಯೂ, ವು, ವೂ, ಸ್ವರೂಪಗಳಿಂದ
ಸುವದಕ್ಕೆ ದೋಷ ಉಂಟು. ಪರಂತು ಎ, ಏ, ಒ, ಓ, ಸ್ವರಗಳನ್ನು
ಸ್ವರೂಪದ ಶಬ್ದಗಳ ಆದಿಯಲ್ಲಿ ಸಹ ಯಾವಾಗ ಉಚ್ಚರಿಸುವ ಶುದ್ಧ ಸ್ವರಗಳೇ

ತಿ ಅಲ್ಲ, ಎ (=ಯ), ಏ, ಒ (=ವ), ಓಕಾರಗಳಿಂ ತಿ-
ರಿಸುವ ಕಾರಣ ಅವುಗಳನ್ನು ಸಾಧಾರಣ ಉಚ್ಚಾರಣೆಗೆ ಅನುಸಾ-
ಬರೆಯುವದಕ್ಕೆ ದೋಷವಿಲ್ಲ" ಎಂದು ನಮ್ಮ ವ್ಯಾಕರಣಕರ್ತರು ಬರೆ-
ದ್ದಾರೆ. ಆದರೆ ಇದರಲ್ಲಿ ಅವರ ಆಲೋಚನೆಯು ಎಷ್ಟು ಸಮ-
ರ್ಪಕವೂ ಆಗಿರುತ್ತದೆಂಬದನ್ನು ನಮ್ಮ ವಾಚಕರೇ ನೋಡಲಿ. ವೈಯಾಕ-
ರಣಿಗಳ ಮತದಿಂದ ಇವಳು, ಎರೆ, ಉಪ್ಪು, ಊಟ, ಈ ಶಬ್ದಗಳನ್ನು ಯಿವ-
ಳು, ಯೆರೆ, ವುಪ್ಪು, ವೂಟ, ಎಂಬ ರೂಪಗಳಿಂದ ಬರೆಯುವ-
ಪಕ್ಷವುಂಟು; ಆದರೆ ಎಲ್ಲಿ, ಏನು, ಒಟ್ಟು, ಓದು ಶಬ್ದಗಳನ್ನು ಯೆಲ್ಲಿ,
ಯೇನು, ವೊಟ್ಟು (ವಟ್ಟು) ವೋದು, ಎಂಬ ರೂಪಗಳಿಂದ ಬರೆಯು-
ಮಾತ್ರ ದೋಷವಿಲ್ಲ, ಇದು ಬಹು ಅಕ್ಷಮ್ಯಕರವಾದ ನ್ಯಾಯವೇ?
ಇದಕ್ಕಿಂತ ಕಣ್ಣುಮುಚ್ಚಿಕೊಂಡು ನಮ್ಮ ಹಿಂಬಾಲ ಬಂದು ಹಾಳುಭಾ-
ಲಿಸಂದು ಯಾಕೆ ನಮ್ಮ ವ್ಯಾಕರಣಕರ್ತ(ರು) ಹೇಳಲಿಲ್ಲ? ಒಂದು ಕಡೆ
ತೋರಿಸಿದ ಕಾರಣವು ಇನ್ನೊಂದು ಕಡೆಯಲ್ಲಿ ಯಾಕೆ ಹತ್ತರಲಿಕ್ಕೆ-
ಕರು ಆಲೋಚಿಸಿದರೋ! ಸ್ವರೋಚ್ಚಾರವು ಉಭಯ ಶಬ್ದಗ-
ಳ ಸಮಾನವೇ. ಆದದರಿಂದ ಸಂಧಿಯಿಲ್ಲದಾಗ ಎಲ್ಲಾ ಕಡೆಯಲ್ಲಿ
ಸ್ವರಗಳನ್ನೇ ಬರೆಯುವದು ಉಚಿತವು. ವಾಕ್ಯಾದಿಯಲ್ಲಿ "ಯ-
ಎಂದು ಬರೆಯುವದಕ್ಕೆ ಎಷ್ಟು ದೋಷವುಂಟೋ, ಅಷ್ಟೇ "
ಎಂದು ಬರೆಯುವದಕ್ಕೂ ಸಹ ಉಂಟೆಂಬದು ಸ್ಪಷ್ಟವಿದೆ. ಅಷ್ಟೇ

ಪ್ರತ್ಯಾಹಾರಗಳನ್ನು ನಲಿಸಿ ನಿಯಮ ಮಾಡುವದು ಶುದ್ಧ ಭಾಷೆ-
ಷ್ಟು ಕಲಿಸುವ ನಮ್ಮ ವ್ಯಾಕರಣಕರ್ತರಿಗೆ ಯಷ್ಟು ಮಾತ್ರ ಪೂರ್ಣತಕ್ಕ-
ದೆಂದು ನಮ್ಮ ಅಭಿಪ್ರಾಯವು.

ಈ ಪ್ರಶ್ನೋತ್ತರದ ಪೂರ್ವಾರ್ಧವೂ, ೭ನೇ ಪ್ರಶ್ನೋತ್ತರ-
ವೂ ಇಲ್ಲದಿದ್ದರೆ ಒಳ್ಳೇದಾಗುತ್ತಿತ್ತು. ಚಿಕ್ಕ ಬಾಲಕರಿಗೋಸ್ಕರ-
ವಿರತಕ್ಕ ಪುಸ್ತಕದಲ್ಲಿ ಇಂಥಾ ಅನಾವಶ್ಯಕವಾದ ಸಂಗತಿಗಳನ್ನು ಸೇರಿ-
ಸಿ ಪುಸ್ತಕ ಬೆಳಸುವದು ಸಮವಲ್ಲ.

೯ನೇ ೧೦ನೇ ಪ್ರಶ್ನೋತ್ತರಗಳಲ್ಲಿ ಸ್ವರವ್ಯಂಜನಗಳ ವಿವೇಚ-
ನೆಯುಂಟು. ಆದರೆ "ಅಂ ಅಃ" ಈ ಎರಡು ವರ್ಣಗಳು ಹುಟ್ಟು-
ಯುವದಕ್ಕೆ ಹೊಂದುವದಾಗಿ ಕಾಣುತ್ತವೆ. ಇವುಗಳನ್ನು ಸ್ವರಗಳೊಳಗೆ
ಸೇರಿಸಿ ಬಿಡಬಹುದಾಗಿತ್ತು.

೧೧ನೇ ಪ್ರಶ್ನೋತ್ತರದಲ್ಲಿ ಇ ಕಾರವು ತಪ್ಪಿಸಿಕೊಂಡಿತು.
ಪ್ರಸ್ತೆಥೋ! ಹಾಂ ಪಶುವೋ! ಇ ಕಾರವು ಪ್ಲುತವರ್ಣವಾದ
ದ ಉದಾಹರಣೆ ಇದ್ದಿದ್ದರೆ ಒಳ್ಳೇದಾಯಿತು.

೧೨ನೇ ಪ್ರಶ್ನೋತ್ತರದಲ್ಲಿ ಹ್ರಸ್ವ, ದೀರ್ಘ, ಸಂಧ್ಯಕ್ಷರ, ಗಳೆಂಬ
ಮೂರು ವರ್ಗಗಳುಂಟು. ಆದರೆ ಇಂಥಾ ವರ್ಗೀಕರಣ ಸ್ಪಷ್ಟವಾದ-
ದ್ದಲ್ಲ; ಇದರ ಪ್ರಯೋಜನವೂ ಇಲ್ಲ. ಉಚ್ಚಾರಣಾಕಾಲವ-
ನ್ನನುಸರಿಸಿ ಹ್ರಸ್ವ ದೀರ್ಘ ಪ್ಲುತ ಎಂಬ ಮೂರು ಸ್ವರಭೇದ-

ಗಳು ಹ್ರಸ್ವಗಳಾಗುತ್ತವೆ. ಹಾಗೆ ಅ, ಇ, ಉಕಾರಗಳು ಉಚ್ಚಾರದಲ್ಲಿಯ ಎ, ಒಕಾರಗಳ ಉಚ್ಚಾರದಲ್ಲಿಯೂ ಸ್ವಾಭಾವಿಕ ಭೇದವೇನೂ ಇಲ್ಲದ್ದರಿಂದ ಅವು ಗಳನ್ನು ಬೇರೆಬೇರೆ ವರ್ಗಗಳಾಗಿ ವಿಭಾಗಿಸುವದು ಸಮ ಅಲ್ಲ. ಐ, ಔ ಕಾರಗಳಿಗೆ ಮಾತ್ರ ಮಿಶ್ರಸ್ವರಗಳೆನ್ನಬಹುದು. ಯಾಕಂದರೆ ಅವುಗಳ ಉಚ್ಚಾರಣೆಯಲ್ಲಿ ಮೊದಲು ಅಕಾರವು ನಿಶ್ಚಯವಾದನಂತರ, ಆ ಯನ್ನು ಬಿಟ್ಟರೆ ಇಕಾರೋಚ್ಚಾರಸ್ಥಾನದಲ್ಲಿ ನಾ ಲಿಗೆಯನ್ನು ಮೇಲಕ್ಕೆ ಎತ್ತೋಣದರಿಂದ ಇಕಾರವೂ, ಉಕಾರೋಚ್ಚಾ ರಾದಿಯಲ್ಲಿ ತುಟಿಗಳನ್ನು ಕೂಡಿಸೋಣದರಿಂದ ಉಕಾರವೂ ಉಂ ಟಾಗುತ್ತವೆ.

---

## *Education in the Southern Division in the Year 1865/66.*

## ಸನ ೧೮೬೫।೬೬ನೇ ವರ್ಷದಲ್ಲಿ ಈ ದಕ್ಷಿಣಭಾಗದಲ್ಲಿ ನಡೆದ ವಿದ್ಯಾಭಿವೃದ್ಧಿಯ ಮುಖ್ಯಸಂಗತಿಗಳು.

ಈ ದಕ್ಷಿಣಭಾಗದಲ್ಲಿ ಬೆಳಗಾವಿ, ಧಾರವಾಡ, ಕಲಾದಗಿ, ಕಾನಡ ಪ್ರಾಂತ ನಾಲ್ಕು ಜಿಲ್ಲೆಗಳುಂಟು. ಮತ್ತು ರಾಜರ ಸಂಸ್ಥಾನಗಳು ದ ಮೇಲಿಂದ ಗಳಲ್ಲಿ ಕನ್ನಡ ಜಿಲ್ಲೆಯ ಶಿಕ್ಷಣ ಸ್ತಾಂತರದ ಕಟ್ಟರ

ಬಲಧೋರಣೆಗಳವರಿಂದ ಬಾರ್ಜಿ ತೆಗೆದುಕೊಂಡರು. ತರುವಾಯ ಮೈಸೂರ
ಬಾನ ಪೊಲಿಟಿಕಲ ಎಜೆಂಟ ಸಾಹೇಬರು ಸರದಾರ ಜನರ ನಾಲ್ಕೈದು ಗಳಲ್ಲಿ
ಯ ಶಾಲೆಗಳನ್ನು ಇವರ ವಶದಲ್ಲಿ ಕೊಟ್ಟರು. ಆದದರಿಂದ ಈಗ ಸುಮಾರು
೨೦೦ ಶಾಲೆಗಳು ಇವರ ಅಧಿಕಾರದಲ್ಲಿರುತ್ತವೆ.

ಈ ಭಾಗದಲ್ಲಿ ಬೆಳಗಾವಿಯಲ್ಲಿ ಒಂದು ಹಾಯಸ್ಕೂಲು ಅಂದರೆ-
ಉಚ್ಚ ಇಂಗ್ಲಿಶ ಶಾಲೆಯೂ, ಧಾರವಾಡ, ಕಾರವಾರ, ಹೊನ್ನಾವರ, ಕುಮಟಾ
ರು ಸ್ಥಳಗಳಲ್ಲಿ ಸುಪೀರಿಯರ ಆಂಗ್ಲೋವರ್ನಾಕ್ಯುಲರ ಎಂಬ ದೇಶಭಾ
ಷೆಯನ್ನು ಇಂಗ್ಲಿಶ ಭಾಷೆಯನ್ನು ಕಲಿಸುವ ಶಾಲೆಗಳೂ ಇರುತ್ತ
ವೆ. ಹಾಯಸ್ಕೂಲಿನಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಮಾಸ್ತರರಿಗೆ ಸರದಾರ ಜ
ನರಿಂದ ಪಗಾರ ಸಲ್ಲುತ್ತದೆ. ಮಿಶನದವರಲ್ಲದೆ ಸರಕಾರದವರ ಮುಖ್ಯ. ಈ
ಶಾಲೆಯ ಹೆಡಮಾಸ್ತರರಾದ ಬೇಲ ಸಾಹೇಬರು ಸುಮಾರು ೩ ತಿಂಗಳ
ಳಿಗೆ ಇಲ್ಲಿ ಬಂದರು. ಇವರು ಅಕ್ಸಫರ್ಡ ಯುನಿವರ್ಸಿಟಿ ಎಂಬ ಮಹಾ
ವಿದ್ಯಾಸ್ಥಾನದಲ್ಲಿ ಬಹುಮಾನವುಳ್ಳ ಬಿರುದು ಹೊಂದಿದವರು. ಇವರ ಹೊ
ಸಲನೇ ಅಸಿಸ್ಟಂಟರಾದ ಶ್ರೀರಾಮಭಟಜೀ ಇವರಾದರೂ ಇದೇ ವರ್ಷ
ದಲ್ಲಿ ನೇಮಿಸಲ್ಪಟ್ಟರು. ಈ ಶ್ರೀರಾಮಯ್ಯನವರು ಮುಂಬಯಿಯ ಯುನಿ
ವರ್ಸಿಟಿ ಎಂಬ ಮಹಾವಿದ್ಯಾಸ್ಥಾನಕ್ಕೆ ಹೊಂದಿದವರು. ಇವರು ಇಲ್ಲಿ
ರುವ ಮುಂಚೆ ಕಾರವಾರದ ಇಂಗ್ಲಿಷ ಶಾಲೆಯ ಹೆಡಮಾಸ್ತರರಾಗಿ-
ದ್ದರು —

ಈ ಪೂರ್ವದಲ್ಲಿ ನೇಕಾರ ಜನರ ಪ್ರಗತಿಯ ದುಸ್ಥಿತಿಯಿಂದ ವಿ
ದ್ಯಾರ್ಥಿಗಳನ್ನು ಹಾಯಸ್ಕೂಲುಗಳಲ್ಲಿ ಮಾಫಿಯಿಂದ ತೆಗೆದುಕೊಳ್ಳುವದು ಅ
ಗತ್ಯವಾಗಿರುತ್ತದೆ. ಅದರಂತೆ ಹೈಸ್ಕೂಲುಗಳಲ್ಲಿ ಅಭ್ಯಾಸ ಮಾಡುವ ತರ್ಕಸ್ವಂ
ಸ್ಕೃತಿ ಉಳ್ಳರಂಥವರನ್ನು ತೆಗೆದುಕೊಳ್ಳಬೇಕೆಂದು ನೇಕಾರರವರು ಗ
ಯು ಬರದ ನಿಯಮಕ್ಕೆ ನೇಕಾರ ಜನರು ಒಪ್ಪಿಕೊಂಡಿದ್ದಾರೆ.

ಕಲಾದಗಿಯಲ್ಲಿ ಒಂದು ಇಂಗ್ಲಿಷ ಶಾಲೆಯು ಚೇತ್ರವೇ ಆಗುವದು
ಟು. ಅಲ್ಲಿ ಕಾಲಾಂತರ ಕಲ್ಲಿಸುವ ಬಗ್ಗೆ ಅಲ್ಲಿಯ ಜನರು, ಸರಕಾರ ಹಾಗೂ
ವರ ಪರಿಶ್ರಮದಿಂದ ೩೦೦೦ ರುಪಾಯಿಗಳ ಕಟ್ಟಡ ಕಟ್ಟಲಾಗಿರುತ್ತದೆ.

ದೇಶಭಾಷೆಯ ಶಾಲೆಗಳಲ್ಲಿ ವಿದ್ಯಾಭ್ಯಾಸವು — ಕನ್ನಡ ಲೋಕಲ
ವರು ಬಹುದಿನದ ಮಹಾರಾಷ್ಟ್ರ ಗುಜರಾಥ ಪ್ರಾಂತ್ಯಗಳಲ್ಲಿ ಆಯಾ ದೇ
ಭಾಷೆಗಳು ಶ್ರೀನಿ ಅಭಿವೃದ್ಧಿಯಾಗಿರುತ್ತವೆಯೋ, ಅದೇ ಮೇರೆಗೆ ಕ
ಗದಲ್ಲಿ ಕನ್ನಡ ಭಾಷೆಯಾಗಬೇಕೆಂಬದಾಗಿ ಅವರು ಬಹು ಯತ್ನಿಸು
ತ್ತಿದ್ದಾರೆ. ಈ ಉದ್ದೇಶ ಪೂರ್ತಿಗಾಗಿ ಬೇಕಾಗಿ ಅವರು ಮಾಡಿದ ಉಪಾಯ
ಗಳು ಯಾವವೆಂದರೆ — ರಾವಸಾಹೇಬ ಮಹಾದೇವ ವಾಸುದೇವ ಬ
ಇವರು ಘನತೆಯುಳ್ಳವರಾಗಿ ಕಾಲೇಜಿಯ ವಿಷಯ ಬೇರೆ ಸ್ಥಳಗಳಲ್ಲಿ
ಮಿನಲ್ಲಿ ಸ್ಥಿರದಿಂದ ಅವರನ್ನು ಧಾರವಾಡಲ್ಲಿ ಕಾಲೇಜಿಯ ವಿಷಯ ಇನಸ್ಪೆಕ್ಟರರೆಂ
ಕ್ಕೆ ಚಲಬೆಸಿದ್ದಾನವರ ಯೋಜನೆಯಾಯಿತು. ಇವರು ಮೂಲತಃ ಧಾ
ರವಾಡದವರಾಗಿ ಜಾತಿಯಿಂದ ಬಂಗವಂತರಾದದ್ದರಿಂದ ಇವರು ಕನ್ನಡ ಭ

ಯ ಪೂರ್ಣ ಅಭಿಮಾನಿಗಳಾಗಿರುತ್ತಾರೆಂದು ನಾವು ಹೇಳುವ ಪ್ರಯೋಜನವಿಲ್ಲ. ಇವರಲ್ಲಿ ಕೆಲಗರು ಸಾರ್ವಜನಿಕ ಕೆಲಸಕ್ಕೆ ನೇಮಿಸಿದ ಅಸಿಸ್ಟಂಟರಾದರೂ ಕನ್ನಡ ಭಾಷೆಯನ್ನು ಚನ್ನಾಗಿ ಬಲ್ಲವರು. ಧಾರವಾಡ, ಕಲಾದಗಿ ಜಿಲ್ಲೆಗಳಲ್ಲಿ ಮಿಶನ ಕ್ರೈಸ್ತರರು ಮಹಾರಾಷ್ಟ್ರದೇಶದ ಪಂಚಾಂಗಗಳನ್ನು ಶಾಲೆಗಳನ್ನು ಸ್ಥಾಪಿಸಿ ತಕ್ಕಷ್ಟು ಕನ್ನಡ ಭಾಷೆಯನ್ನು ಕಲಿತು ಹೊಸ್ತಕಗಳ ರಚನೆ ಪೂರೈಕೆಗಳು ಅವರಿಗೆ ಮಾಡಿದ ಕುಟುಂಬದ ಪ್ರಕಾರ ಅವರು ಸಹಾಯ ಹೊಂದಿದ್ದಾರೆ. ಇದಲ್ಲದೆ ಕನ್ನಡ ಭಾಷೆಯ ಪರೀಕ್ಷೆ ಹಾದ ಬೇರೆ ಇಂಗ್ಲಿಷ ಶಾಲೆಗಳ ಮಾಸ್ತರರಿಗೆ ಕೂಡ ಮರಾಠಿ ಜನರನ್ನು ನೇಮಿಸಿದರು. ಶಾಲೆಗಳ ಪಠ್ಯಪುಸ್ತಕಗಳನ್ನು ತಿದ್ದಿ ಕನ್ನಡ ಭಾಷೆಯ ಅಭ್ಯಾಸಕ್ಕೆ ತಕ್ಕಷ್ಟು ಇವೆ ಎನ್ನುತ್ತಾರೆ. ನಾರ್ಮಲ ಶಾಲೆಯ ಹೆಡ ಮಾಸ್ತರ ಕೆಲಸಕ್ಕೆ ಸ್ಟ್ ಅಸಿಸ್ಟಂಟ ಕೆಲಸಕ್ಕೂ ಇಂಗ್ಲಿಷ ಭಾಷೆಯನ್ನೂ ಕನ್ನಡ ಭಾಷೆಯನ್ನೂ ಚನ್ನಾಗಿ ಬಲ್ಲವರನ್ನು ನೇಮಿಸಿದರು. ಕನ್ನಡ ಕಾವ್ಯಗ್ರಂಥಗಳನ್ನು ಚನ್ನಾಗಿ ಬಲ್ಲವರೂ, ಬಹುದಿವಸ ಶಾಲೆಯ ಕೆಲಸದಲ್ಲಿ ಪರಿಶ್ರಮ ಮಾಡಿದವರೂ ಆದ ಇಬ್ಬರು ಶಿಕ್ಷಕರನ್ನು ಡೆ. ಇನ್ಸ್ಪೆಕ್ಟರ ಹುದ್ದೆಗೆ ನೇಮಿಸಿದರು.

ಈ ರೀತ ಮಹಾರಾಷ್ಟ್ರ ಗವರ್ನಮೆಂಟು ಕನ್ನಡಿಗರ ಭಾಷಾಂತರದಲ್ಲಿತ್ತು. ಗವರ್ನಮೆಂಟಿನ ಪೂರ್ವದಲ್ಲಿಯೇ ಭಾಷಾಂತರವಾಗಿರುವೆ. ಅದನ್ನು ಭಾವಿಸುವ ತಕರಾರು ನಡೆದರೆ.

ಸರದಾರ ಇನಾಮದಾರರು - ಕೊಲ್ಹಾಪುರದಲ್ಲಿಯೂ, ಮಿರಜಿಯಲ್ಲಿಯೂ ಒಂದೊಂದು ಇಂಗ್ಲಿಷ ಶಾಲೆಯುಂಟು. ಸಾಂಗಲಿ, ಜಮಖಂಡಿ, ಮುಧೋ-

ಆ ಹೊಸ ಸಂಸ್ಥಾನಗಳಲ್ಲಿಯೂ ಇಂಗ್ಲಿಷ ಶಾಲೆಗಳಾಗುವವು. ಕೊಲ್ಲಾಪು-
ರ ಸಾಂಗಲಿ ಸಂಸ್ಥಾನಗಳಲ್ಲಿ ಸ್ವತಂತ್ರ ವಿದ್ಯಾಖಾತೆಗಳಿರುತ್ತವೆ.

---

ಶಾಲೆಗಳೂ, ವಿದ್ಯಾರ್ಥಿಗಳೂ
ಸಂಖ್ಯೆಯ ವರ್ಣನೆಗಳು:

| | ಸಂವತ್ಸರ ೧೯೪೧-೪೨ | | ಸಂವತ್ಸರ ೧೯೪೨-೪೩ | |
|---|---|---|---|---|
| | ಶಾ | ವಿದ್ಯಾ- | ಶಾಂ | ವಿ |
| ಇಂಗ್ಲಿಷ | ೪ | ೭೪೭ | ೪ | ೨೫೭ |
| ದೇಶಭಾಷೆಯ | ೧೨೭ | ೯೫೭೪ | ೧೬೨ | ೧೨೨೫ |
| ನಾರ್ಮಲ್ ಸ್ಕೂಲ್ | ೧ | ೩೯ | ೧ | ೪೭ |

---

ಜಮಾಖರ್ಚಿನ ಸಂಖ್ಯೆಯ ವರ್ಣನೆಗಳು—

| | ಸಂವತ್ಸರ ೧೯೪೧-೪೨ | ಸಂವತ್ಸರ ೧೯೪೨-೪೩ |
|---|---|---|
| ಫೀ— | | |
| ಜಮಾ | ರೂ. ೨೩೭೩೭ | ೧೦೨೪೭೬೯ |
| ಖರ್ಚು | ರೂ. ೨೨೫೬೯೬೧೦ | ೯೭೮೪೬೧೦೬ |
| ಮಂಜೂರಿ (ಸರಕಾರದಿಂದ) | | |
| ಜಮಾ | ೧೦೨೧೯೬೧೧೬೧೦ | ೨೦೪೯೨೬೪೬ |
| ಖರ್ಚು | ೪೯೯೧೬೭೬೭ | ೧೪೪೪೯೬೧೬ |

## ಮ್ಯುನಸಿಪಲ ಫಂಡು.

ಸಂ. ೧೮೮೪|೮೫ ಸನ್ನು ೧೮೮೫|೮೬

ಜಮಾ ........................ ೨೧೩೪೬೮೯........೨೪೪೪೯

ಖರ್ಚು " " " ೧೮೪೧೭೬೪ " " ೨೮೦೪೬೦೬

ಸ್ಥಾನಿಕ ಫಂಡುಗಳು

ಜಮಾ " " " ೩೦೩೬೧೩೮ " " ೧೦೬೧೬೧೦

ಖರ್ಚು " " " ೩೧೦೭೬೨೭ " " ೭೮೪೧೩೧೧

ವಿದ್ಯಾಶಾಖೆ.

ಜಮಾ " " " ೩೭೭೩೪೬ " " ೧೩೪೮೦೪೩

ವರ್ಷದಲ್ಲಿ ಬಿಟ್ಟ ಖರ್ಚು

ಸರ್ಕಾರ " " " " " ೮೧೦೬೪೬೭೧೦

ಶಿಕ್ಷೆ " " ೨೭೩೭೬೮೮ " ೪೩೦೦೧೧೧೬

ಮುದ್ರಾಂಕಗಳ ವಿಕ್ರಯವು.

೬೭೦೬೧೩೫ " ೪೭೪೧೯೧

(ಮುದ್ರಾಂಕ ವಿಕ್ರಯವು ಹೆಚ್ಚುವುದಕ್ಕೆ ಕಾರಣವು ಇಂದಾಗಿ ಗಾ[illegible] ಅಪ್ರತ್ಯಕ್ಷವಾಯಿತೆಂದು ತಿಳಿಯುತ್ತದೆ.)

ಬೆಳಗಾವಿ ಜಿಲ್ಲೆಯಲ್ಲಿ ಶೀತಮ್ಮ.

ಹಿಂದಿನ ವರ್ಷದ ಮೊಬಲಗು ............... ೪೬೨

ಈ ವರ್ಷದ ಆಕಾರವು " " " ೨೧೨೦

ಅಂತು ೨೫೮೨

ಖರ್ಚು

ತಲಬು ............................ ೧೯೬೨

ಕರಕೂಲು " " " " ೪೯೪

ಪಾಡಿಲವಾರ ... " " " ೧೮೧

[illegible]

ಈ ಜಿಲ್ಲೆಯಲ್ಲಿ ೧೯೦೧ನೇ ವರ್ಷ ೪೪ ಶಾಲೆಗಳಿದ್ದವು. ಈ ವರ್ಷ ೧೧೬ ಶಾಲೆಗಳಾದವು. ಈ ೧೧೬ ಶಾಲೆಗಳಲ್ಲಿ ೯ ಮರಾಠೀ ವರ್ಗದ ಅಂಗ್ಲೋವರ್ನಾಕ್ಯುಲರ ಶಾಲೆಗಳುಂಟು. ಅವುಗಳಲ್ಲಿ ಬೆಳಗಾವಿ (ಮರಾಠಿ) ಹಸನಗಡ, ... ಕ್ರಮಗಳ ಶಾಲೆಗಳು ಉತ್ತಮ.

ಶಾಲೆಗಳಿಗೆ ಸಹಾಯ ಮಾಡಿದವರು— ಸರಕಾರದ ಶ್ರೀ ಧೋರೆಗಳು, ಕೆ. ಅ. ಸ. ಬಟಲ ಧೋರೆಗಳು, ಮಿಶನರಿ ಪರೋಪಕಾರಿಗಳು ಮುನಸಿಪಾಲಿಟಿ; ಲೋಕಲ ಬೋರ್ಡುಗಳ ಮೆಂಬರರು; ಮುನಸಿಪಾಲ ಕಮಿಟಿ, ಹುಬ್ಬಳ್ಳಿ ಯಾದವಾಡ, ಕಿತ್ತೂರುಗಳ ಮಾಲಕರುಗಳು; ಅಥಣಿ, ಗೋಕಾವಿಗಳ ಸಾವುಕಾರರು— ಶಿರಸಂಗಿ, ಕಲ್ಲೋಳಿ, ಸೋಲಬರುಗಳ ಸಿ

ಸಾಯಿಗಳು; ನವದತ್ತಿಯಲ್ಲಿ ಚಿಕ್ಕಬೀಮುದಿಯ ಪ್ರಣನವರು, ಶಿರ್ಸಾ-
ಬಿಯಲ್ಲಿ ರಾಬಾದೀಕ್ಷಪಾಂಡೆ; ಇಟ್ಟಿಗಿಯಲ್ಲಿ ಸಾಹುಕಾರ ಶಿರೋಪ್ತದ ಮಲ್ಲಪ್ಪಾಚಾರ್ಯ
ಪ್ರಣನವರು, ಬಾಗೆವಾಡಿಯಲ್ಲಿ ಕತ್ತೀಬಸವಣ್ಣನವರು.

---

ಧಾರವಾಡ ಜಿಲ್ಲೆಯಲ್ಲಿ ಅಂಗ್ಲೋವರ್ನಾಕ್ಯುಲರ ಶಾಲೆಗಳು ೧೧ವು; ಅವು
ಗಳಲ್ಲಿ ಹುಬ್ಬಳ್ಳಿಯ ಶಾಲೆ ಶ್ರೇಷ್ಠವಾದದ್ದು. ಈ ದಕ್ಷಿಣ ಭಾಗದಲ್ಲೆಲ್ಲ ಈ ಶಾಲೆ
ಯು ಶ್ರೇಷ್ಠವಾದದ್ದೆಂದು ನೋಡಿ ಇನಸ್ಪೆಕ್ಟರರು ಈ ಶಾಲೆಯ ಮಾಸ್ತರರಿಗೆ
೫ ರೂ. ತಲಬು ಹೆಚ್ಚಿಸಿದರು — ಧಾರವಾಡ, ಹಾನಗಲ್ಲು, ಮೊರಬ, ನ-
ರಗುಂದ, ಗದಗ, ಧುಂಡಶಿ, ಕಲಘಟಗಿ, ನರೇಗಲ್ಲು, ಕಜ್ಜಗಿಗಳಲ್ಲಿಯ
ಶಾಲೆಗಳು ಸರಸಾಗಿರುತ್ತವೆ.

ಶಾಲೆಗಳಿಗೆ ಸಹಾಯ ಮಾಡಿದವರು — ಧಾ. ಅಂಕಲೇಶ್ವರ ವರ್ಗದ
ಗಟನ ಧೋರೆಗಳು, ಡಿಂ. ಕಂ. ಹರ್ನ ಧೋರೆಗಳು; ಕಜ್ಜಗಿಯ ಸಾಮರ
ಕಾರ ಹಂಚು ವಡನಗಾಂವಕರು; ನರಗುಂದ ಬಂಕಾಪೂರಗಳ ಸಾಹಾಲವರಿ
ಗಳು; ಕಜ್ಜಗಿಯ ಕೊಟ್ಟಜಡಾರತ್ತಪ್ಪಾ ಸಾಯಿಬಂಬವರು.

ಕಲಾದಗಿ ಜಿಲ್ಲೆಯಲ್ಲಿ ಹಿಂದಿನ ವರ್ಷ ೨೨ ಶಾಲೆಗಳಿದ್ದವು. ಈ
ವರ್ಷ ಹೊಸತಾಗಿ ಯಾಕಂದರೆ ಜಿಲ್ಲೆಗೆ ಸೇರಿದ್ದರಿಂದ ೯ ಹೊಸ ಶಾಲೆಗಳು ಬಂ
ದದ್ದರಿಂದ ೩೧ ಶಾಲೆಗಳು ಈ ವರ್ಷ ಆದವು. ಅಂದರೆ ೬೦ ಶಾಲೆಗಳು; ಜಿ
ಲ್ಲೆಯಲ್ಲಿ ೪ ಅಂಗ್ಲೋವರ್ನಾಕ್ಯುಲರ ಶಾಲೆಗಳುಂಟು. ಅವುಗಳಲ್ಲಿ ಬಾ-

ಗಳಿಗೋಸ್ಕರ ಯಶಾಲೆಗಳಿದ್ದವು. ಕೊಡಗಿನಲ್ಲಿ ಈ ವರ್ಷ ಹೊಸತೊಂದು
ಬೋರ್ಡಿಂಗ ಹೋಂ ಸ್ಥಾಪಿಸಲಾಯಿತು.

ಕಾನಡಾಜಿಲ್ಲೆಯಲ್ಲಿ — ಇಂಗ್ಲಿಷ ಶಾಲೆಗಳುಂಟು. ಕಾರವಾರ, ಹೊನ್ನಾವರ, ಕುಮಟಾ, ಅಂಕೋಲಾ ಈ ೪ ಸಮುದ್ರತೀರ ಗ್ರಾಮಗಳಲ್ಲಿ ಆಂಗ್ಲೋ ವರ್ನಾಕ್ಯುಲರ ಶಾಲೆಗಳು ಸ್ಥಾಪಿಸಲ್ಪಟ್ಟವು. ಇವಲ್ಲದೆ ಮೇಲಿನ ಕೆಲವು ಹೊಸಶಾಲೆಗಳಾದವು. ಈ ಮಾರ್ಗದಲ್ಲಿ ಶಿಕ್ಷಣವೆಂದರೂ, ಬೇರೆ ಕಾರಣಗಳಿಂದಲೂ ಜನರು ಬಹಳ ಕ್ರಮವಹಿಸಿದರು. ಇದರ ಮೇಲೆ ಗದಗ ಮುಂತಾದ ಗಳಲ್ಲಿ ಅಲ್ಲದೆ ಹೊಸ, ಬೇರೆ ಗ್ರಾಮಗಳಿಗೆಯೂ ಹೋಗಿರುವದರಿಂದ ಈ ಜಿಲ್ಲೆಯ ಪ್ರಾಂತಗಳ ಮೂಲಕ ಊರೂರಿನ ಸಭೆಯ ಮೂಲಕ ತಮ್ಮ ಮನಃಪೂರ್ವಕದಿಂದಿರುತ್ತಾರೆ.

ಇನಸ್ಪೆಕ್ಟರರು ಕೆಲವು ಶಾಲೆಗಳಲ್ಲಿ ಬಹುಶಃ ಯಲ್ಲಾಪುರ ಮುಂತಾದ ಗ್ರಾಮಗಳನ್ನು ನೋಡಿ, ಪ್ರತಿ ಜನರಲ್ಲಿ ವಿದ್ಯೆಯ ಅಭಿರುಚಿಯು ಹುಟ್ಟುತ್ತದೆ ಎಂದು ಬಹಳ ಸಂತೋಷಿಸಿದರು.

---

ಈ ವರ್ಷ ನಾಮದಾರ ಗವರ್ನರ ಸಾಹೇಬರವರು ಈ ದಕ್ಷಿಣ ಭಾಗದ-
ಷ್ಟು ನೋಡಿ ಹೋದದ್ದರಿಂದ ವಿದ್ಯಾಭಿವೃದ್ಧಿಗೂ, ಬೇರೆ ಅನೇಕ ಸಂಗತಿಗಳಿಗೂ ಬಹಳ ಪ್ರಯೋಜನವಾಯಿತು. ಈ ಶಾಲೆಗಳು ಬಹಳ ದಯಾವಂತರೂ ವಿದ್ಯಾಭಿಮಾನಿಗಳೂ ಆಗಿದ್ದ ದ್ದು ತೋರುತ್ತದೆ. ಇಲ್ಲಿ ಕೆಲವುಗಳಲ್ಲಿ

ಸಮುದಾಯವೆಲ್ಲ ಒಂದು ವಿದ್ಯಾಲಯದೊಳಗೆ ಸೇರಿ ಕೂಡಿದಾಗ ಶಿಕ್ಷ-
ಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಬೇಕೆಂದರೆ « ಕೇವಲ ಧನದಿಂದ
ಶಿಕ್ಷಣೆಯು ಅಗತ್ಯಕ್ಕಾಗಿ ಆಗುವದಿಲ್ಲ. ವಿದ್ಯೆ ಕಲಿಸುವದು [illegible]
ಬಹು ವಿಚಿತ್ರವಾದ ಕೆಲಸವು. ಕೇವಲ ಧನಲೋಭದಿಂದ ಇದನ್ನು ಸ್ವೀಕರಿಸ
ಬಾರದು. ಈ ಕೆಲಸವು ಬಹು ಮಹತ್ತರವಾದದ್ದು; ಪ್ರತಿಷ್ಠೆಯುಳ್ಳದ್ದಾ-
ಗಿರುವದು. ಉಲ್ಲಾಸದಿಂದ ಅದನ್ನು ಕೈಕೊಂಡರೆ ತಕ್ಕ ಫಲವಾಗುತ್ತದೆ. ಪ್ರೋ-
ತ್ಸಾಹ ಧನಲೋಭದಿಂದಲ್ಲ. ಆದಾಗ್ಯೂ ಈ ಕೆಲಸ ಮಾಡುವವರಿಗೆ ನಿರ್ವ-
ಹಣ ಧನವಿಲ್ಲದೆ ಆಗದೆಂಬುದು ನಿಜವು. ಇದರಿಂದ ಅವರಿಗೆ ಹಣವು
ಬಹು ಅಗತ್ಯವಾಗಿರುತ್ತದೆ. ಅನುಭವದಿಂದ ತಿಳಿಯಬಂದದ್ದೇನೆಂದರೆ,
ಒಬ್ಬ ಶಿಕ್ಷಕನು ಎಷ್ಟು ಬುದ್ಧಿವಂತನೂ ಉಲ್ಲಾಸಿಗನೂ ಆಗಿದ್ದಾಗ್ಯೂ ಬ-
ಹು ಸ್ವಲ್ಪ ವಿದ್ಯಾರ್ಥಿಗಳಿಗೆ ಮಾತ್ರ ಕಲಿಸಲು ಸಮರ್ಥನಾಗುತ್ತಾನೆ. ಈ ನಿಯ-
ಮವು ಸಾರ್ವತ್ರಿಕವಾಗಿ ಅಬಾಧಿತವಾಗಿರುತ್ತದೆ. ಒಬ್ಬ ಶಿಕ್ಷಕನು ೧೫ ಯಾ
೨೦ಕ್ಕಿಂತ ಹೆಚ್ಚು ಹುಡುಗರಿಗೆ ಕಲಿಸ ಹೋದಾಗ ಅವನಿಂದ ಆ ಕೆಲಸವು-
ಕ್ರಮವಾಗಿ ಆಗುವದಿಲ್ಲ. ಅಧಿಕ ಜನ ವಿದ್ಯಾರ್ಥಿಗಳಿಗೆ ಒಬ್ಬನೇ ಕಲಿಸುವವನಾ-
ದರೆ ಅದರಿಂದ ಫಲವೇನೂ ಬಾರದೆ ಶ್ರಮವು ನಿಷ್ಫಲವಾಗುತ್ತದೆ. ಆದ್ದರಿಂ-
ದ ವಿದ್ಯಾರ್ಥಿಗಳ ತಾಯಿತಂದೆಗಳು ಪೂರ್ಣ ನಿಶ್ಚಯಿಸತಕ್ಕದ್ದೇನೆಂದರೆ,
ತಮ್ಮ ಬಾಲಕರಿಗೆ ಚನ್ನಾಗಿ ವಿದ್ಯಾಭ್ಯಾಸವಾಗಬೇಕೆಂಬ ಅಪೇಕ್ಷೆ ಅವರಿಗಿದ್ದರೆ,
ಹಣ ಖರ್ಚುಮಾಡದೆ ಅದು ಪೂರ್ಣವಾಗುವದಿಲ್ಲ. ಮತ್ತು ತಮ್ಮ

ಬಾಲಕರು ಉನ್ನತಿಗೆ ಬರಬೇಕಾದರೆ, ತಮ್ಮ ಚರಿತ್ರವನ್ನು ಲಕ್ಷಿಸದೆ ಹೋಗಬಾರದು
ಮಾಡಿ ಅವರಿಗೆ ವಿದ್ಯಾಭ್ಯಾಸ ಮಾಡಿಸುವದು ತಂದೆತಾಯಿಗಳ ಧರ್ಮವು."

ಈ ಸಂಭಾಷಣೆಯಲ್ಲಿ ನಾಮಧಾರಕರುಗಳು ಪ್ರತ್ಯಕ್ಷ ಸಿದ್ಧವಾದ ಉತ್ತಮೋತ್ತಮ ಗುಣಗಳ ಚಕ್ರವರ್ತಿಯ ಅಧಿಕಾರಿಗಳೂ, ಮಾನ್ಯರು ವಿದ್ಯಾರ್ಥಿಗಳ ತಾಯಿತಂದೆಗಳು ಬಹಳ ಲಕ್ಷ್ಯಕೊಡಬೇಕೆಂದು ನಾವು ಅಪೇಕ್ಷಿಸುತ್ತೇವೆ.

---

## *Description of Southern Maratha*

## ದಕ್ಷಿಣಮಹಾರಾಷ್ಟ್ರದ ವರ್ಣನೆ.

ಗುರ್ಜರ ಗುರುಗಳಲ್ಲೊಬ್ಬರಾದ ಮಿಸ್ತರ ಕೆಜ್ ಬೆಲ್ ಮಾರ್ಟಿನ್ ಸಾಹೇಬರು ಬಹುದಿವಸ ವಾಸವಾಗಿದ್ದಾರೆ. ಅವರು ಬಹುಕಾಲ ಈ ಕರ್ನಾಟಕ ದೇಶದಲ್ಲಿ ಸಂಚಾರ ಮಾಡಿದವರಾಗಿ, ಈ ದೇಶದ ಜನರ ನಡಾವಳಿಗಳನ್ನು ಚನ್ನಾಗಿ ಅರಿತುಕೊಂಡದ್ದಲ್ಲದೆ ಕನ್ನಡ ಭಾಷೆಯಲ್ಲಿಯೂ ಅವರು ಅತ್ಯುತ್ತಮವಾಗಿ ಸಂಪಾದಿಸಿಕೊಂಡಿದ್ದಾರೆ. ಕನ್ನಡ ಭಾಷೆಯಲ್ಲಿ ಗ್ರಂಥ ಬರೆಯುವವರಲ್ಲಿ ಪ್ರವೀಣತೆಯುಳ್ಳವರು ಈ ಪ್ರಾಂತ್ಯದಲ್ಲಿ ಕೆಲವರು ಮಾತ್ರ ಇರುವರೆಂದು ನಾವು ನಂಬುತ್ತೇವೆ. ಈ ಗ್ರಂಥಕರ್ತರು ಸರಕಾರದವರ ಅನುಮತಿಯಿಂದ ಈ ದಕ್ಷಿಣಮಹಾರಾಷ್ಟ್ರದ ವರ್ಣನೆಯೆಂಬ ಪುಸ್ತಕವನ್ನು ಬರೆಯುತ್ತಿದ್ದಾರೆ. ಇಂಗ್ಲಿಷ ಭಾಷೆಯಲ್ಲಿಯೂ, ಕನ್ನಡದಲ್ಲಿಯೂ, ಇದರ ಪ್ರತಿ-

ಗಳನ್ನು ಬೇರೆ ಬೇರೆ ಭಾಷಿಸಬೇಕೆಂಬುದಾಗಿ ಅವರ ಅಭಿಲಾಷೆಯುಂಟು.
ಅವರಿಗೆ ಆಗತಕ್ಕ ಸಹಾಯ ಮಾಡುವ ಬಗ್ಗೆ ನಾಮದಾರ ಗವರ್ನರ ದೊರೆಗಳ
ವರ ಅಪ್ಪಣೆಯು ಈ ಭಾಗದೊಳಗಣ ಕಲೆಕ್ಟರರುಗಳಿಗೆ ತಪ್ಪದ ಪ್ರಕಾರ ಯಾ
ವತ್ತು ಮಾಮಲೇದಾರರಿಗೂ ಅವರವರ ಕಲೆಕ್ಟರರುಗಳ ಹುಕುಂ ಆದಂತೆ ತಿಳಿ
ಯ ಬರುತ್ತದೆ. ಆದರೆ ಆ ಸ್ಕೂಲ್ ಬೋರ್ಡಗಳಿಗೆ ತಿಳಿಸತಕ್ಕ ಸಂಗತಿಗಳೆ
ಲ್ಲಾ ಈ ಭಾಗದ ಇನಸ್ಪೆಕ್ಟರರ ಮುಖಾಂತರವಾಗಿ ಹೋಗತಕ್ಕವು-
ಗಳಾಗಿರುತ್ತವೆ. ಆದ್ದರಿಂದ ನಮ್ಮ ಮಾಸ್ತರ ಜನರೆಲ್ಲರು ಈ ವಿಷಯವಾ
ಗಿ ಜಾಗ್ರತೆ ವಹಿಸತಕ್ಕದ್ದು. ಅವರು ತಮ್ಮ ತಮ್ಮ ಗ್ರಾಮಗಳಲ್ಲಿಯೂ, ನೆ
ರೆಹೊರೆಯಲ್ಲಿಯೂ ಇದ್ದ ವಿಶೇಷ ಸಂಗತಿಗಳನ್ನು (ಭೂಮಿಯ ವಿಶ
ಗಳು, ಸಸ್ಯಾದಿಗಳು, ಗಿರಿ, ಗಹ್ವರ, ವನ, ನದಿ, ಕೆರೆ, ಜನರ ನಡತೆಯು
ವೈಚಿತ್ರ್ಯಗಳು, ಬೇರೆ ಚಮತ್ಕಾರಗಳು) ನಿಜವಾಗಿ ತಿಳುಕೊಂಡು ಟಿ
ಪ್ಪಣಿ ಬರೆಯಬೇಕು. ಈ ಕೆಲಸದಲ್ಲಿ ಮುಖ್ಯವಾಗಿ ತಾಲೂಕಾ ಮಾಸ್ತರರು ಜವಾ
ಬದಾರರಾಗಿರುತ್ತಾರೆ. ಅವರು ತಮ್ಮ ತಾಲೂಕಗಳಲ್ಲಿರುವ ಮಾಸ್ತರರ ಸ
ಹಾಯದಿಂದಲೂ, ತಮ್ಮ ಸ್ವಂತ ಶ್ರಮದಿಂದಲೂ ಸದರಿ ಪ್ರಕಾರದ ಮಾ
ಹಿತಿ ಮಾಡಿಕೊಂಡು ತಮ್ಮ ತಾಲೂಕದ್ದೊಂದು ನಕ್ಷೆ ತಯಾರ ಮಾಡಬೇ
ಕು. ಈ ಬಗ್ಗೆ ಡೆಪ್ಯುಟಿ ಇನಸ್ಪೆಕ್ಟರರವರು ಹುಕುಂ ಸಾದರ ಪಡಿಸಿದರು. ಆದ್ದರಿಂ
ದ ತಪ್ಪದ ಹೊತ್ತಿಗೆ ಸದರಿ ನಕ್ಷೆಯನ್ನು ತಾವು ಸಂಪಾದನ ಮಾಡಿ ಅವಶ್ಯವಾ
ಗಿ ತಾಲೂಕಾ ಮಾಸ್ತರರು ಕಳುಹಿಸತಕ್ಕದ್ದು. ಬೇರೆ ಮಾಸ್ತರರಿಗೆ ಸದರಿ

ಪಡುವಂಗಳಿಗೆ ಏಮತರದವಾದ ಉತ್ತರ ಕೊಡುವಲ್ಲಿ ಅವರು ತಯಾ
ಗಿರತಕ್ಕದ್ದು.

ಇದೇ ಲೇಖ ಮಹೀ ಇನಸ್ಪೆಕ್ಟರರ ಹುಕುಮಿನ ಸ್ಥಳದಲ್ಲಿರುತ್ತದೆ.
ತಿಳಿದು ಯಾವತ್ತು ಮಾಸ್ತರರು ತಮ್ಮ ತಮ್ಮ ಶಾಲಾ ದಮಸ್ತಿಗಾ ಯತ್ನ
ಕೀರ್ದ ದೋಶಗಳು ಉದ್ಭವವು, ಗವರನರ ಸಾಹೇಬರ ಅಭಿಲಾಷೆಯು
ಫಲ ಪಾಡುದಲಾಗಿ ಸಹಾಯ ಮಾಡುವರೆಂದು ನಾವು ನಂಬಿರುತ್ತೇವೆ.

---

## *Notification.*

## ಜಾಹೀರನಾಮಾ.

ಧಾರವಾಡ ಜಿಲ್ಲೆ ಶಾಲೆಗಳ ಯಾವತ್ತು ಸರಕಾರಿ ಸಾಲೆಯ ಮಾಸ್ತ
ರರಿಗೆ.

ಹೊಸ ಮಾಸ್ತರರಿಗೆ ದಕ್ಷಿಣ ದರಜಿ ಒಂದರಿಂದ ಗಳಕ್ಕಿಂತ ಹೆಚ್ಚಿಗೆ ಸಂಬಳ
ರೆಯ ಬಡ್ತಿಯಾಗಿ ಅವರು ಮುಕಿರುವದಿಲ್ಲಾ ಅದರಿಂದ ಒಂದು
ಗಳಕ್ಕಿಂತ ಹೆಚ್ಚಿಗೆ ದರಜೆ ಕೊಡಬಾರದೆಂಬದಾಗಿ ಮುಂದೆ ಬಾಸ ಇಲ್ಲ
ಸಪೆಕ್ಟರ ಸಾಹೇಬ ಬಾಂಬೆ ದಕ್ಷಿಣ ಭಾಗ ಇವರು ಠರಾವು ಮಾಡಿ
ರುತ್ತಾರೆ. ಇದಕ್ಕನುಸಾರ ಇತ್ಯಾದಿ, ಮಾಸ್ತರರು ನಮ್ಮ
ರಜೆ ಕಳಿಸಲಿಕ್ಕಾಗಿ ಅರ್ಜಿ ಮಾತ್ರ ಹೋಗಬೇಕು. ತಿಳಿಯುವದು. ಮು
ಮುಕಾಮ ಧಾರವಾಡ. ತಾ|| ೬ ಮಾರ್ಚ ಸನ ೧೮೬೬

೧೩]

*Nagesh Vinayek Baput.*

ಡೆ. ಎ. ಇ. ಜಿಲ್ಲಾ ಧಾರವಾಡ.

---

## *Notice.*

## ನೋಟಿಸು.

ಧಾರವಾಡ ಜಿಲ್ಹೆದೊಳಗಿನ ಯಾವತ್ತು ಸರಕಾರಿ ಶಾಲೆಗಳ

ಮಾಸ್ತರರಿಗೆ.

ಕನಬಾಷಾನಗಲ ಶಾಲೆಯೊಳಗಿನ ಮೊದಲನೇ ಮದತನ್ನಿಸುಪಿಸ್ತಸಾಬಿನ ಕರಲಿಂಗಪ್ಪಾಯವರು, ಬಗರಡುಕು ಮಿನಿಂದಾ ಕೆಲಸವನ್ನು ಬಿಟ್ಟು ಹೋರಟು ಹೋದ ತಪ್ಪಿನದ್ದರಿಂದಾ, ಅವರಿಗೆ ೧ ರುಪಾಯಿ ದಂಡ ಮಾಡೋಣ. ವರಲ್ಲಿ ಬರೆದಿರುತ್ತದೆ. ಇದನ್ನು ನೆನಪಿನಲ್ಲಿ ಇಟ್ಟು, ಜಿಲ್ಲಾ ಮಜಕೂರದೊಳಗಿನ ಯಾವತ್ತು ಕಾಂತರುಗಳು ಅವರವರ ಕೆಲಸ ಮಾಡಲಾರದವರು ಇತ್ಯಾದಿ ರಜೆ ತೆಗೆಯದೆ ಕೆಲಸ ಬಿಟ್ಟು ಹೋಗದ ಹಾಗೆ ತಜವೀಜ ಇಡತಕ್ಕದ್ದು.

ತಾ॥ ೨೬ ನೇ ಮಾಹೆ ಅಕ್ಟೋಬರ ಸನ ೧೮೭೬ ನೇ ಇಸವಿ ಮುಕ್ಕಾಂ ಧಾರವಾಡ.

*Nagesh Vinayek Baput.*

ಡೆ. ಎ. ಇ. ಜಿ. ಧಾರವಾಡ.

---

*Notice.*

# ನೋಟೀಸು

ಧಾರವಾಡ ಜಿಲ್ಹೆದೊಳಗಿನ ಯಾವತ್ತೂ ಸರಕಾರಿ ಶಾಲೆ
ಗಳ ಮಾಸ್ತರರಿಗೆ

ಈ ವರ್ಷ ಜಿಲ್ಹಾ ಮಜಕೂರಿನಲ್ಲಿ ಬಿಸಲಿನ ಕಾವು ಬಹಳ ಆಗುತ್ತದದೆ. ಇದರ ದೆಸೆಯಿಂದಾ ಶಾಲೆಗಳೊಳಗಿನ ಬರುವ ಹೋಗುವ ವಿದ್ಯಾರ್ಥಿಗಳಿಗೆ ಬಹಳ ಶ್ರಮ ಆಗುತ್ತಿದ್ದೀತು, ಹೀಗೆ ತಿಳಿದು ಮಹೇರಬಾನ ಇನಸ್ಪೆಕ್ಟರ ಸಾಹೇಬ ಬಹಾದ್ದೂರ ದಕ್ಷಿಣ ಭಾಗ ಇವರ ಮಂಜೂರಿ ಮೇಲಿಂದಾ ಜೂನ ಸ. ೧೮೬೬ ನೇ ಯಿಸ್ವಿ ಮುಗಿಯುವವರೆಗೂ ಪ್ರಾತಃಕಾಲದಲ್ಲಿ ೬ ಘಂಟೆ ಹಿಡಿದು ೯ ಘಂಟೆ ವರೆಗೂ, ಮತ್ತು ಮಧ್ಯಾನ್ಹದಲ್ಲಿ ೨ ಘಂಟೆ ಹಿಡಿದು ೪॥ ಘಂಟೆ ವರೆಗೂ, ಈ ಪ್ರಕಾರ ಶಾಲೆಯ ವೇಳೆಯನ್ನು ಕಟ್ಟು ಪಡಿಸ ಮಾಡಲ್ಪಟ್ಟದೆ. ಇದನ್ನು ಎಲ್ಲ ಮಾಸ್ತರರು ಅಮಲಿನಲ್ಲಿ ತಂದು, ಶಾಲೆ ನಡಿಸಬೇಕೆಂದು ತಿಳಿಯುವದು.

ತಾರೀಖ ೨೬ ನೇ ಮಾಹೆ
ಏಪ್ರೀಲ ಸ. ೧೮೬೬ ನೇ
ಯಿಸವಿ ಮುಕಾಂ ಧಾರವಾಡ

*Nagesh Vinayek Bapu*
ಡೆ. ಇ. ಇ. ಜಿ. ಧಾರವಾಡ.

*Notice.*

# ನೋಟೀಸು.

## ಧಾರವಾಡ ಜಿಲ್ಲೆಯೊಳಗಿನ ಯಾವತ್ತು ಸರಕಾರಿ ಸಾಲಿಗಳ ಮಾಸ್ತರರಿಗೆ-

ನೀವು ಸಾಲೆಗಳಲ್ಲಿ ಇಂಗ್ಲಿಷ ಅಭ್ಯಾಸ ನಡಿಯುತ್ತಿರುವದೋ, ಅಲ್ಲಿ ಇಂಗ್ರಜಿ ಕಲಿಯುವ ವಿದ್ಯಾರ್ಥಿಗಳ ಕಡೆಯಿಂದ ಅವರವರ ಯೋಗ್ಯತೆಯ ಪ್ರಕಾರ ಯರಡು ಆಣೆಯ ಹಿಡಿದು ನಾಲ್ಕು ಆಣೆಯವರೆಗೂ ಫೀ ತೆಗೆ ಬೇಕೆಂಬುವ ವಿಷಯದಲ್ಲಿ ಮುಂಚೆ ತಾಕೀದ ಸರಕ್ಯುಲರ ಹುಕುಂ ಆಗಿ ಇದ್ದು ಬರೋಬರ ರೀತಿಯಿಂದಾ ಅಮಲಿನಲ್ಲಿ ಬಂದಿಲ್ಲವೆಂತ ನಮ್ಮ ನಜರಿಗೆ ಬಂದದೆ. ಇನ್ನು ಮೇಲೆ ಯರಡು ಆಣೆಯಕಿಂತ ಕಡಿಮೆ ಬಿಲಕುಲ್ಲ ತೆಗೆದುಕೊಳ್ಳಬಾರದು. ತಿಳಿಯುವದು.

ತಾ॥ ೧೮ ನೇ ಮಾಹೆ<br>ನವಂಬರ ೧೮೬೫ ನೇ ಇಸ್ವಿ<br>ಮುಕ್ಕಾಂ ಧಾರವಾಡ.

*Nagesh Vinayek Bapat*<br>ಡೆ. ಇ. ಸ್ಕೂ. ಜಿ. ಧಾರವಾಡ.

A Catalogue of Vernacular Publicati

# ದೇಶಭಾಷೆಯಲ್ಲಿ ಛಾಪಿಸಿದ ಗ್ರಂಥಗಳ
# ಪಟ್ಟಿ.

ನಮ್ಮ ಹಿಂದು ದೇಶದ ಯಾವ ಯಾವ ಭಾಷೆಯಲ್ಲಿ ಯಾತ್ರ ಗ್ರಂಥಗಳಿ ರುತ್ತವೆ, ಅವುಗಳ ವಿಸ್ತಾರ ಯಷ್ಟು, ಕರ್ತರು ಯಾರು, ಅವು ಯಲ್ಲಿ ಛಾಪಿಸಲ್ಪಟ್ಟ ಈ ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳಬೇಕೆಂಬ ಶೋಧಕರಾದ ಬುದ್ಧಿ ವಂತರಿಗೆ ಬಹಳ ಔತ್ಸುಕ್ಯವಿರುತ್ತದೆ, ಅದರಿಂದ ಲಾಭವೂ ಉಂಟು. ಆ ಈ ದಕ್ಷಿಣದೇಶದಲ್ಲಿ ಇಂಥಾ ತರದ ಸಂಗತಿಗಳು ತಿಳಿಯುವದು ಬಹಳ ಕ ವಾಗಿರುತ್ತಿತ್ತು ಅದು ಸುಲಭವಾಗಬೇಕೆಂಬ ಆಲೋಚನೆಯಿಂದ ಮುಂ ಬಾಯಿ ಇಲಾಖೆಯ ವಿದ್ಯಾಧಿಕಾರಿಯಾದ ಮಹನೀಯ ಸರ್ ಅಲೆಕ್ಸಾಂಡ ಗ್ರಾಂಟ ಸಾಹೇಬರವರು ಈ ದೇಶದ ಭಾಷೆಗಳಲ್ಲಿ ಛಾಪಿಸಿದ ಪುಸ್ತಕಗಳ ದೊಂದು ಪಟ್ಟಿಯನ್ನು ಇಂಗ್ಲಿಷ ಭಾಷೆಯಲ್ಲಿ ತಯಾರು ಮಾಡಿ ಛಾಪಿಸಿ- ದ್ದಾರೆ.

ಈ ಪಟ್ಟಿಯನ್ನು ನಾವು ನೋಡಿದ್ದೇವೆ. ಇದರೊಳಗಣ ಪ್ರಯೋ ಜನಕರವೂ, ಚಮತ್ಕಾರವೂ ಆದ ಸಂಗತಿಗಳೇನಂದರೆ -

ಇದರಲ್ಲಿ ಯೆರಡು ಭಾಗಗಳುಂಟು. ಮೊದಲನೇ ಭಾಗದಲ್ಲಿ ಮುಂ ಬಯಿ ಇಲಾಖೆಯೊಳಗಣ ದೇಶಭಾಷೆಯ ಛಾಪುಖಾನೆಗಳ ಹೆಸರು, ಳ, ಅಪಿ, ಅವು ಆರಂಭವಾದ ವರ್ಷಗಳು ಬರೆದಿರುತ್ತವೆ. ಅದರಿಂದ

ತಿಳಿಯುವದೇನೆಂದರೆ, ಈ ಗ್ರಂಥಸೂಚಿಯಲ್ಲಿ ದೇಶಭಾಷೆಯ ಛಾಪಖಾನೆಗಳು ೫೫ ಇರುತ್ತವೆ. ಅವುಗಳಲ್ಲಿ ಮುಂಬಯಿಯಲ್ಲಿ ೧೫, ಸುರತ್ತಿನಲ್ಲಿ ೧೦, ಪುಣೆಯಲ್ಲಿ ೪, ಅಹಮದಾಬಾದಿನಲ್ಲಿ ೬, ಕರಾಚಿಯಲ್ಲಿ ೫, ಭರೋಚದಲ್ಲಿ ೨, ಬೆಳಗಾಂವಿಯಲ್ಲಿ, ಕಾಳೆವಾಡದಲ್ಲಿ ೨, ಅಹಮದನಗರ, ಸಾತಾರಾ, ರತ್ನಾಗಿರಿ, ಬೆಳಗಾಂವಿ, ಧಾರವಾಡ ಈ ಸ್ಥಳಗಳಲ್ಲಿ ಒಂದೊಂದು ಇರುತ್ತವೆ. ಇವು ಆರಂಭವಾದ ವರ್ಷಗಳನ್ನು ನೋಡಲಾಗಿ ತಿಳಿಯುವದೇನೆಂದರೆ, ೧೮೫೦ನೇ ವರ್ಷದ ಪೂರ್ವದಲ್ಲಿ ೯ ಮಾತ್ರವೇ ಇರುತ್ತಿದ್ದವು. ೧೮೬೦ನೇ ವರ್ಷದ ಪೂರ್ವದಲ್ಲಿ ನೋಡಿದರೆ ೩೨ ಇದ್ದವು. ಇದರಿಂದ ಕಳೆದ ೫ ವರ್ಷಗಳಲ್ಲಿ ೨೨ ಹೊಸ ಛಾಪಖಾನೆಗಳಾದವು, ಮತ್ತು ಗ್ರಂಥಗಳನ್ನು ಓದುವ ಅಪೇಕ್ಷೆಯು ಜನರಲ್ಲಿ ಹುಟ್ಟುತ್ತ ನಡೆದದೆ, ಎಂದು ತಿಳಿಯಬರುತ್ತದೆ.

ಇದರ ಎರಡನೇ ಭಾಗದಲ್ಲಿ ಛಾಪಿಸಿದ ಗ್ರಂಥಗಳ ಹೆಸರು, ಅವುಗಳ ಕರ್ತರ ಹೆಸರು, ಛಾಪಿಸಿದ ವರ್ಷ, ಗ್ರಂಥದ ಪ್ರತಿ, ಕ್ರಯ ಮೊದಲಾದವು ಬರೆದಿರುತ್ತವೆ. ಗ್ರಂಥಗಳ ಕ್ರಮವ್ಯಾವುದೆಂದರೆ, ಮೊದಲು ಸಂಸ್ಕೃತ, ತರುವಾಯ ಮಹಾರಾಷ್ಟ್ರ, ಗುಜರಾಥಿ, ಕನ್ನಡ, ಹಿಂದುಸ್ತಾನಿ, ಫಾರಸಿ, ಸಿಂಧಿ ಗ್ರಂಥಗಳು ಕ್ರಮವಾಗಿರುತ್ತವೆ. ಈ ಪಟ್ಟಿಯಲ್ಲಿ ಆಂಗ್ಲಭಾಷೆಯ ವರ್ತಮಾನ ಪತ್ರಗಳೂ, ಮಾಸಿಕಪುಸ್ತಕಗಳೂ

ಹೊರಬಿದ್ದಿವೆ.

ಇದರಲ್ಲಿ ಹಿಂದ್ಯಾಕೂಡಿ ೮೪೦ ಪತ್ರಿಕೆಗಳು ಹೊರಬೀಳುತ್ತವೆ. ಅವುಗಳ ಬೇರೆಬೇರೆ ಭಾಷೆಗಳಲ್ಲಿಯ ಸಂಖ್ಯೆ ಹೀಗಿದೆ—

| | | | |
|---|---|---|---|
| ಸಂಸ್ಕೃತ | ... | ... | ೧೩೦ |
| ಮಹಾರಾಷ್ಟ್ರ | " | " | ೪೩೦ |
| ಗುಜರಾಥಿ. | " | " | ೨೩೭ |
| ಕನ್ನಡ. | " | " | ೧೪ |
| ಹಿಂದುಸ್ಥಾನಿ(ಪಾರಸಿ) | | " | ೨೫ |
| ಸಿಂಧಿ | " | " | ೪ |
| | | ಅಂತು | ೮೪೦ |

ಮೇಲೆ ಬರೆದದ್ದರಿಂದ ಮಹಾರಾಷ್ಟ್ರ ಭಾಷೆಯಲ್ಲಿ ಹೆಚ್ಚು ಗ್ರಂಥಗಳು ಹೊರಬೀಳುತ್ತಲಿರುತ್ತವೆ. ಇದಕ್ಕೆ ತರತರದ ಬೇರೆ ಕಾರಣಗಳು (ಅನೇಕ ವೃತ್ತ ಛಾಪಿಸಿದ್ದರಿಂದ) ವರ್ತಮಾನಪತ್ರಗಳು, ಮಾಸಿಕ ಪುಸ್ತಕಗಳು, ಅಷ್ಟು, ಸರಕಾರದ ಮೊದಲಾದ್ದವುಗಳಾಗಿ ಇವ ಮಹಾರಾಷ್ಟ್ರ ಪುಸ್ತಕಗಳು ಸುಮಾರು ೨೦೦ ಇರುತ್ತವೆ. ಇದರೊಳಗೆ ದಾಸಬೋಧ, ಗುರುಚರಿತ್ರ ಮೊದಲಾದ ಗ್ರಂಥಗಳು ಬಹಳವುಂಟು. ಆದಾಗ್ಯೂ ಮುಂಬಯಿ ಇಲಾಖೆಯಲ್ಲಿ ಮಹಾರಾಷ್ಟ್ರದವರಿಗೆ ಪತ್ರಿಕೆಗಳನ್ನೋದುವ ಅಭಿರುಚಿ ವಿಶೇಷವೆಂಬುದು ನಿಜವು. ಇದರ ಮುಖ್ಯ ಪತ್ರಿಕೆ-

ಗಳು ಈ ಪತ್ರಿಯಲ್ಲಿ ಇನ್ನು ಬರಬೇಕಾಗಿದೆ. ಅವುಗಳಲ್ಲಿ ಅತ್ಯಾಸಕ್ತವಾದ ಇಸಾಪನೀತಿ, ಮಹಾರಾಷ್ಟ್ರರಚರಿತ್ರೆ, ಗವನೀತ, ಮುಕ್ತಮಾಲಾ ಮೊದಲಾದ್ವವು ಪತ್ರಿಯಲ್ಲಿ ಮೊದಲಿಗೇ ಸೇರಿದರೆ ಇಷ್ಟಪ್ರಾಪ್ತಿಯರ್ಗವು.

ಈ ಪತ್ರಿಯಿಂದ ತಿಳಿದುಬರುವ ಬೇರೆ ಕರವಾದ ಸಂಗತಿಯೇನಂದರೆ, ಕನ್ನಡ ಭಾಷೆಯಲ್ಲಿ ಎಲ್ಲಾ ಪ್ರಕಾರದ ಸಿಂಧೀಬಾಷೆಯ ಗ್ರಂಥಗಳ ಮರಾಠೀ ಪಾಲಕ್ಕಿಂತ ಹೆಚ್ಚು ಪುಸ್ತಕಗಳು ಛಾಪಿಸಲ್ಪಟ್ಟಿಲ್ಲ. ಆದರೆ ಕನ್ನಡಿಗರಲ್ಲಿ ಗ್ರಂಥಗಳೇ ಇಲ್ಲವೋ, ಇದ್ದು ಛಾಪಿಸೋಣಾಗಲಿಲ್ಲವೋ ಎಂದು ನೋಡಿದರೆ, ಎರಡೂ ನಿಜವೆಂದು ಕಂಡುಬರುತ್ತದೆ. ಗ್ರಂಥಗಳೆಂದರೆ, ಹಳೆಗನ್ನಡಿಗರಲ್ಲಿ ಮಹಾರಾಷ್ಟ್ರರಂ ಪಾಲಕಷ್ಟು ಸ್ವತಂತ್ರಗ್ರಂಥಗಳುಂಟು. ಅವೆಲ್ಲ ಮಹಾರಾಷ್ಟ್ರಗ್ರಂಥಗಳ ಹಾಗೆ ಸಂಸ್ಕೃತದಿಂದ ಭಾಷಾಂತರಿಸಿದವಲ್ಲ, ಮೂಲತಃ ಕನ್ನಡಿಗರಲ್ಲಿಯೇ ಹುಟ್ಟಿರುತ್ತವೆ. ಅವುಗಳ ಮಾಧುರ್ಯವನ್ನು, ಪ್ರಾಸಕ್ತತೆಯನ್ನು, ಪ್ರಯೋಗಶುದ್ಧಿಯನ್ನು, ವಿಷಯಬಾಹುಳ್ಯವನ್ನು ನೋಡಲಾಗಿ, ಈ ದಕ್ಷಿಣ ದೇಶದಲ್ಲಿ ಸಂಸ್ಕೃತದ ಹಿಂದೆ ಹಳೆಗನ್ನಡೇ ಸಾರಸಾದ ಬಾಷೆ ಎಂದು ತಿಳಿಯುತ್ತದೆ. ಆದರೆ ಹಳೆಗನ್ನಡ ಈಗಿನ ಕನ್ನಡಿಗರಿಂದ ಕೇವಲ ಬೇರೆ ಭಾಷೆ ಎಂದು ಗ್ರಹಿಕೆಯಾಗಿದೆ. ಅದನ್ನು ಬಲ್ಲವರು ಬಹು ಸ್ವಲ್ಪ ಜನ; ವಸ್ತುತಃ ಸಂಸ್ಕೃತಮಿಶ್ರವಾದದ್ದರಿಂದ ಅದರಲ್ಲಿ ಉಂಟಾದ ಕಷ್ಟಸಾ-

ಠ್ಯಪುಸ್ತಕಗಳನ್ನು ಶಕ್ತಿಗಳಿಂದಲೂ ಉಪಯೋಗವಿಲ್ಲ. ಯಾವ ಗ್ರಂಥಗಳ
ಕೂಡಿ ಬಂದಿರುವ ಪದ್ಯ ಮಾತ್ರ ಅತ್ಯವಶ್ಯವಾದವುಗಳನ್ನು ಶಬ್ದಗ
ಳುಳ್ಳದ್ದು. ಅದನ್ನೋದಿ ಅವುಗಳನ್ನು ತಿಳಿದುಕೊಳ್ಳುವರೆ ಯತ್ನವ
ಮಾಡುವವನಿಗೆ ಅವು ಕೇವಲ ಸುಸಾಧ್ಯಗಳಾಗಿರುತ್ತವೆ. ಆದರೆ ಸಲಹ
ವವನಿಗೆ ಉತ್ತೇಜಕ ಕಾರಣವೇನೂ ಇಲ್ಲ. ಇತರ ಭಾಷೆಗಳಲ್ಲಿ ಗ್ರಂಥ
ಗಳನ್ನು ಹೆಚ್ಚಿಸುವರೆ ಸರಕಾರದವರು ಜನರಿಗೆ ಅನೇಕ ಕೊಟ್ಟ ಮೇಲಿಗೆ ಸ
ಗ್ರಂಥಗಳಿಗೆ ಬಹುಮಾನ ಕೊಡುವದರಿಂದ ಅವು ಅಭಿವೃದ್ಧಿಯಾಗಿವೆ

ಈ ಪತ್ರಿಕೆಯಲ್ಲಿ ಕನ್ನಡ ೧ನೇ, ೨ನೇ, ೩ನೇ ಪುಸ್ತಕಗಳೂ, ಅ
ಬ ಎನ್ನುವಾಯಿಪ್ಸ ಎಂಬದರ ಎರಡು ಭಾಗಗಳೂ ಬರೆದಿದ್ದಾ
ರ ವೃತ್ತಿಯುದು. ನವನಾಗರಿಕಲವಿಕ ಗ್ರಂಥಗಳು ಹಾಡಿಬೇ
ತ್ರವೆ. ಅವರೆಲ್ಲಿಯ ವರು ಯಾವ ಸಾರಿಟರೆ ದಾಗ್ರ್ಯ ತಪ್ಪು ಮುದ್ರಣ
ಬವರು ಬರೆದ ಕಲ್ಪನೆ ಒಳ್ಳೆಂದು ನೋಡಿ ಬಹು ಖುಷ್ಯಾಗಿತ್ತೆವೆ

ಈ ಪತ್ರಿಕೆಯನ್ನು ತಿದ್ದುವ ಬಗ್ಗೆ ಮೇಲೆ ಸರಕಾರದವರ
ಅಭಿಪ್ರಾಯದಂತೆಯೇ ನಮ್ಮ ಅಭಿಪ್ರಾಯವುಂಟು.

---

## *Correspondence*

## ಪತ್ರಗಳ ಸಾರಾಂಶವು

ನಮ್ಮ ಮಾಜಕ ಚಂದಗಳ ಅಂಕಿಯಲ್ಲಿ ಹುಟ್ಟವಾಗಿ ಪತ್ರ ಬರೆಯ

ವವರಣ್ಣ ಹಾಕೀದಿಯ ಮಾನ್ಯರನ್ನು ನಾವು ಗಣಿಸಿದರೆ ಬಹಳ ಹೋಸವಾಗಿ ಒಬ್ಬ ವಿದ್ಯಾರ್ಥಿಯು ಸದರಿ ಮಾನ್ಯರ ಚಿತ್ರ ಒಂದು ಮಾಡು ಚಿತ್ರಿಸಿಯ ಪ್ರಕಟಿಸಿದ್ದು ನಾನು ನೋಡಿಲ್ಲ. ಹೀಗಿರುತ್ತಾ ಅವರು ನಿರಸಾಗಿಬರಿ ಮುತ್ತಾಳ ಒಂದು ನಾವು ಹೇಳುವದು ತಪ್ಪಾಗ, ಎಂದು ಕೇಳುತ್ತೇನೆ. ಆ ದಿನದ ಮಗಿ ತಪ್ಪದ ಚಿತ್ರಗಳು ಪ್ರಕಟನೆಗೆ ಯೋಗ್ಯವಿವೆ ಎಂದು ನಾವು ಯಾರಿಗಾದರೂ ಹೇಳಿಕೊಳ್ಳುವುದುಂಟೋ?

---

**ಹಲ್ಯಾಳ-** ಇಲ್ಲಿಯ ಜನವೇ ಬಡ ನಿರಸಾಗಿರುತ್ತದೆ. ಮತ್ತೆ ಮಾತ್ರ ನನ್ನ ಆಗಲಿಲ್ಲ. ಹೈಸ್ಕೂಲು ದಿವಸಗಳ ಹಿಂದೆ ನನ್ನ ಪ್ರತ್ಯಕ್ಷದೊಳಗೆ ಗಳುತನ್ನ ಕಟೆಂದಿ ಸಹವಾಗಿ ಒಂದು ಸ್ಥಾನದಿವಸ ಹಲ್ಯಾಳದಲ್ಲಿ ನಾನಿದ್ದು ಬಂದೆನು. ಆದರೆ ಅವರಿಗೆ ಅಥವಾ ಅವರ ಸಹಚಾರಿಗಳಿಗೆ ಯೇನು ಅಪಾಯವಾಗದೆ, ಅಲ್ಲಿಯ ಜನರ ಹೀಗೆ ಬಹಳ ಉತ್ತಮವಾಗಿದೆ ಎಂದು ಯಲ್ಲರೂ ಹೇಳುವದನ್ನು ನಾನು ಕೇಳಿದ್ದೇನೆ.

---

**ಹುಬ್ಬಳ್ಳಿ-** ಕಳೆದ ತಿಂಗಳಲ್ಲಿ ಕಂಪರೂ, ಶಾಸ್ತ್ರರೂ ಕೂಡಿಬಂದು ನನ್ನ ಭಾಗಕ್ಕೆ ಹೆಮ್ಮೆ ವರ್ತಿಸಿ ಅಭ್ಯಾಸವು, ಹಬ್ಬದ ಬಗ್ಗೆ ಗಣಿಸ್ವರದಲ್ಲಿ ಅಭಿಪ್ರಾಯ ಬರೆದಿದ್ದಾರೆ, ಹುಬ್ಬಳಿಯು ಬಾಗಿ ೭ ವರ್ಷಗಳಿಂದ ಆಗ್ನ್ಯ ೫೦೨ ದ ವರ್ಷದಿಂದಿತ್ತಲಾಗಿ ಮಾತ್ರ ೨೦೦ ವರೆಗೆ ವಿದ್ಯಾರ್ಥಿಗಳಾಗಿದ್ದಾರೆ.

ಆದರೆ ಬ್ರಾಹ್ಮಣರ ಹುಡುಗರು ಬಹಳ ಇಲ್ಲದ್ದರಿಂದ ಶಾಲೆ ಕ್ರಮೇಣ ಬರುಬರುತ ವಿದ್ಯಾರ್ಥಿಗಳು ಬರುತ್ತಿರುವರು.

ಹಳ್ಳಿಯವ್ರು ಬಂಜನಾಗಿಯ್ಯ್ರ ಯಂ ಬಸಾಹುಕಾರರಾದ್ದರಿ ಯುನ್ನಡೆ ಶಾಲೆಯಿಂದ ಬಂದಿದ್ದ ಸ್ಥಳದಲ್ಲಿಗಳು ನಂದರೆಯಲ್ಲಿ ನಾಗನಗನೂ ತಪ್ಪಿ ಹೋಯಿತಲ್ಲುಳ್ಳದೇ.

---

**ಪರ್ವತಿ** — ಕಲಾದಗಿ ಜಿಲ್ಲೆಯ ಬಂನ್ನಂ ಶಕ್ರ್ರುದು ಯಿಂದ ಲ್ಲಿ ಮ್ಯುನಸಿಪಾಲಕಮಿಟಿಯ ಸ್ಥಾಪನವಾಯಿತು. ಇಲ್ಲಿ ಶಾಲೆಯಾಗಿ ಮೂರು ೧೦ ವರ್ಷಗಳಾದವು. ಮೊದಲನೇ ೬ ವರ್ಷಗಳಲ್ಲಿ ೨೦।೪೦ ಮಾತ್ರ ವಿದ್ಯಾರ್ಥಿಗಳಿದ್ದರು. ಮುಂದೆ ೨ ವರ್ಷ ೫೦ ವರೆಗೆ ಅವರ ಸಖ್ಯೆಯಾಯಿತು. ಇತ್ತಲಾಗಿ ಇಷ್ಟರಲ್ಲಿ ಯುತ್ತಾ ಹಗ ೨೦೦ ಜನ ವಿದ್ಯಾರ್ಥಿಗಳಾಗಿದ್ದಾರೆ. ಇವರಲ್ಲಿ ೪೦ ಜನ ಬ್ರಾಹ್ಮಣರು, ಉಳಿದವರೆಲ್ಲರೆ ಶಾರರೇ.

---

**ಸಿದ್ದಾಪುರ** — ಈ ಗ್ರಾಮದಲ್ಲಿ ತಾಲೂಕ ಕಚೇರಿಯಾಗಿ ಇಲ್ಲಿ ಶಾಲಾ ಶಾಲೆಯು ಹರಿವನೆ ಪಗರದ ಅಂಗ್ಲೋ ವರ್ನಾಕ್ಯುಲರ ಶಾಲೆಗಳೇ ಆಗಿದೆ. ೧೫ ಮಕ್ಕಳು ಶಾಲೆಯ ಸಾಮಾನು ಕೊಡು ವರಲ್ಲೆ ಬಿಕೊಂಡಿದ್ದಾರೆ. ಹಳೆಯ ಶಾಲೆಗೆ ಹೊಸ ರೆಮ್ಮ ಬದಾರ ಕನ್ನಡ ಯಾಪಾ

೬. ಅವರು ಮೊದಲನೇ ದಿವಸ ಶಾಲೆಯನ್ನು ಪ್ರವೇಶಿಸಿ ಹುಡುಗರಾದ ಯು ಗಳು ಮಾಯಿಕ್ಕಂಬಿ ತಿನ್ನಲ್ಲದೆ, ಅವರ ಅಧ್ಯಾಪಕರೂ ಬಂದವರೂ ಬಳಿಕ ಈ ಮೂವರು - ಬುಟ್ಟಿಗಳನ್ನು ಹೊತ್ತುಕೊಂಡು ಹೋಗುತ್ತಾರೆ.

## *Notification*

## ಪ್ರಕಟನೆ.

ನಮ್ಮ ಮುಂತಿಗೆ ಗಾರರಿಗೆ ತಿಳಿಯ ಪಡಿಸುವದೇನಂದರೆ, ಸ್ಥಳದ ತಿಂಗಳಿನಿಂದ ಈ ಪತ್ರಿಕೆಯಲ್ಲಿ ೪ ಪುಟಗಳನ್ನು (ಸ್ಥಿರದಷ್ಟು) ಹೆಚ್ಚಿಸುವದರಿಂದ ನಾವು ಕ್ರಯವು ಪ್ರತಿ ಬಂದಕ್ಕೂ ೨ ಆಣೆ ಮಾಡಲ್ಪಟ್ಟದೆ.

ಪತ್ರಿಕೆಯನ್ನು ಬೆಳಸುವ ಮುಖ್ಯ ಉದ್ದೇಶವೇನಂದರೆ, ಈ ದಕ್ಷಿಣಾ ಭಾಗದಲ್ಲಿ ಪ್ರತಿ ತಿಂಗಳಲ್ಲಿ ಆಗುವ ವರ್ತಮಾನಗಳು, ಬಾಜಾರ, ಬರತಫಿ ಮೊದಲಾದವುಗಳನ್ನು ಛಾಪಿಸಬೇಕೆಂಬ ಬಗ್ಗೆ ಮುಂಬಯಿ ನಮ್ಮ ಪತ್ರಿಕೆಯ ಗೂರಿಕೆಗಳ ಅಭಿಪ್ರಾಯವುಂಟು. ಆದ್ದರಿಂದ [illegible] ಯಂದರೆ ಬೆಳಗಾವಿ, ಧಾರವಾಡ, ಕಲಾದಗಿ, ಕಾನಡಾ ಜಿಲ್ಲೆಗಳು ಮೊದಲಾದ ೫ ಜಿಲ್ಲೆಗಳ ವ್ಯಾಪಾರ ಬೆಳಸುವದೇನಂದರೆ ಈ ವರುಷಂದು ತಮ್ಮ ಜಿಲ್ಲೆಗಳಲ್ಲಿ ಆಗುವ ಸಂದರ್ಭ ಪ್ರಕಾರದ ವರ್ತಮಾನಗಳನ್ನು ಆಗಾಗ್ಗೆ ನಮಗೆ ಬರೆಯುತ್ತಾ ಇರಬೇಕು.

ಜಾನ್ಯುವರಿ, ಫೆಬ್ರುವರಿ ಮೊದಲಾದ ಮೂರು ತಿಂಗಳು ಗಳು ಮುಂತಿಗೆಯವರನ್ನು ನಮ್ಮ ನಾಲ್ಕು ಜಿಲ್ಲೆಗಳ ೫ ವರುಷ ಕ್ರಯವನ್ನು ಕಾಯಿದೆಂದು ನಾವು ಹೇಳುತ್ತೇವೆ.

ವೆಂಕಟರಂಗೋ

ಎಡಿಟರ

# ಮಠಪತ್ರಿಕೆಯು.

ಪುಸ್ತಕ ೧ — ೧ ಸಂಚಿಕೆ

[library stamp]

---

ಬೆಳಗಾವಿ, ಮಾಹೆ ಜೂನ ೧೯೬

---

## Education.

### ೧ ನೇ ಭಾಗ.

### ವಿದ್ಯಾಸಾಧನದ ಪದ್ಧತಿಗಳು, ರೀತಿಗಳು, ಅವುಗಳ ಅರ್ಥವು—

ಶಿಕ್ಷಣದ ಪದ್ಧತಿ ಯಂದರೆ, ಕಲಿಸುವ ಪ್ರಕಾರ ವ್ಯವಸ್ಥೆಗಳ ಕ್ರಮವು, ಶಿಕ್ಷಣದ ರೀತಿ ಯಂದರೆ ಯಾವ ರೀತಿಯಿಂದ [illegible] ವಿಷಯವನ್ನು ಕಲಿಸುವದಲ್ಲವೋ, ಹಾಗೆ [illegible] ವಿದ ಮಾರ್ಗವು. ಶಿಕ್ಷಣದ ಪದ್ಧತಿಗಳಿಗೆ ಅದರ ರೀತಿಗಳು ಅನುಸರಿಸುತ್ತವೆ.

ಈಗ ಉಪಯೋಗಿಸಲ್ಪಡುವ ಮುಖ್ಯವಾದ ಪದ್ಧತಿಗಳು ಸಾಮುದಾಯಿಕವು, ವ್ಯಕ್ತಿ ವಿಷಯಕವು ಯೆಂ[illegible]ಬುಗಳು. ಅನೇಕರಿಗೆ ಒಟ್ಟಾಗಿ ಕಲಿಸುವದೇ ಸಾಮುದಾಯಿಕ ಪದ್ಧತಿಯು, ಬೆಟ್ಟಾಟ್ಟಿನಗೆ [illegible] ಕಲಿಸುವ [illegible]

ವೃತ್ತಿವಿಷಯಕ ಪದ್ಧತಿಯೂ, ಎಂದು ಸ್ಪಷ್ಟವಿದೆ.

ಶಿಷ್ಯಶಿಕ್ಷಕ ಪದ್ಧತಿ ಎಂಬ ಒಂದು ಹೊಸ ಪದ್ಧತಿಯು ಇತ್ತೀಚೆಗೆ ಪ್ರಚಾರದಲ್ಲಿ ಬರುತ್ತ ನಡೆದಿದೆ. ಇದು ಸಾಮುದಾಯಿಕ ಪದ್ಧತಿಯ ಮುಖ್ಯವಾದ ಒಂದು ಭಾಗವೆಂದು ಹೇಳಬಹುದು. ಶಿಷ್ಯರಾದ ಶಿಕ್ಷಕರು ತಮ್ಮ ಗುರುಗಳ ಶಿಕ್ಷಣಕ್ರಮಗಳನ್ನನುಸರಿಸಿಕೊಂಡು ಅವರ ಶಿಷ್ಯರಿಗೆ ಕಲಿಕೆ ನಡೆಸುತ್ತಾರೆ- ಇದರಲ್ಲಿ ತಾತ್ಕಾಲಿಕ ಶಿಷ್ಯಶಿಕ್ಷಕ ಪದ್ಧತಿ ಎಂಬುದೊಂದು ಅವಾಂತರಭೇದವುಂಟು. ಶಾಲೆಯ ವಿದ್ಯಾರ್ಥಿಗಳ ಸಹಕಾರದಿಂದ ಹಣವನ್ನು ತೆತ್ತು ಅವರು ಶಿಕ್ಷಕರಾಗಿದ್ದರೆ, ಅದು ಶಿಷ್ಯಶಿಕ್ಷಕ ಪದ್ಧತಿಯು, ಆ ವಿದ್ಯಾರ್ಥಿಗಳಿಗೆ ಹಣವನ್ನು ಕೊಡದೆ ಇದ್ದರೆ, ಅದು ತಾತ್ಕಾಲಿಕ ಶಿಷ್ಯಶಿಕ್ಷಕ ಪದ್ಧತಿಯು. ಇವೆರಡು ಪದ್ಧತಿಗಳು ಸಹ ನಮ್ಮ ಶಾಲೆಗಳಲ್ಲಿ ನಡೆಯುತ್ತವೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಜನ ಶಿಕ್ಷಕರಿಲ್ಲದಿದ್ದಲ್ಲಿ ಯಾವದಾದರೂ ಒಂದು ಬಗೆಯಾಗಿ ಕೆಲಸ ನಡೆಯ ಬೇಕೆಂದು ಮೇಲಿನ ವರ್ಗದ ವಿದ್ಯಾರ್ಥಿಗಳನ್ನು ಕೆಳಗಿನ ವರ್ಗಗಳಿಗೆ ಕಲಿಸುವದಕ್ಕೆ ಕಳಿಸುವದುಂಟು. ಇಂಥಾ ತರದ ಶಿಕ್ಷಣದಿಂದ ಲಾಭವಾಗಬಹುದು. ಆದರೆ ಹೀಗಿನ ನಮ್ಮ ಶಾಲೆಗಳ ಸ್ಥಿತಿಯನ್ನು ನೋಡುವಾಗ ಮಾರ್ಗದಲ್ಲಿ ಒಂದರಿಂದ ನವ್ಯ ಯೋಜನೆಯಾಗುತ್ತದೆ ಯೋಗ್ಯವಲ್ಲವೋ, ಎಂದು-

ಭ್ರಾಂತಿಯುಂಟು.

ಶ್ರೀಪರಮೇಶ್ವರನು ಎಲ್ಲರಲ್ಲಿಯೂ ಬುದ್ಧಿ ಪ್ರಭಾಗ ಶಕ್ತಿ ಯೆಂದು ಹೊಂದು ಹೊಸ ಶಕ್ತಿಯನ್ನುಂಟುಮಾಡಿದ್ದಾನೆ. ಇದರಲ್ಲಿ ಕಾರ್ಯವನ್ನು ಮೂರು ಭಾಗಗಳಾಗಿ ವಿಭಾಗಿಸಿ, ಅವುಗಳೊಂದರಲ್ಲಿ ಮಾತ್ರವು ಬೇರೆಬೇರೆ ವಿಷಯಗಳನ್ನು ಒಳಗೊಂಡಿರುವುದರಿಂದ ಒದಗುತ್ತದೆ. ಈ ಶಕ್ತಿಯ ಮುಖ್ಯ ತಾತ್ಪರ್ಯವೇನೆಂದರೆ, ಎಲ್ಲ ವಿದ್ಯಾರ್ಥಿಗಳೂ ಮಾತ್ರವ- ಸ್ವಂತ ಶಕ್ತಿಯು ಪ್ರಬಲವಾಗಿ, ಕಾರಣವಿಲ್ಲದ ಅಪ್ರಯೋಜಕವಾದ ದೊಡ್ಡ ಯತ್ನ ಮಾತ್ರವು ಆಗಬಾರದು.

ಇವುಗಳಲ್ಲಿ ಒಂದಕ್ಕಿಂತ ಹೆಚ್ಚು ಶಕ್ತಿಗಳನ್ನು ಕೂಡಿಸಿದರೆ, ಅದಕ್ಕೆ ಮಿಶ್ರಶಕ್ತಿಯೆಂದು ಹೇಳಬಹುದು.

ಕಲಿಸುವ ಮುಖ್ಯವಾದ ರೀತಿಗಳು ಎರಡಿವೆ, ಒಂದು ಏಕೀಕರಣವೂ, ಇನ್ನೊಂದು ಪೃಥಕ್ಕರಣವೂ. ಅತಿಸುಲಭವಾದ ವಿಷಯಗಳನ್ನು ಒಂದಕ್ಕೊಂದು ಜೋಡಿಸುತ್ತಾ ಹೋಗಿ, ಅವುಗಳಿಂದ ಉಂಟಾಗುವ ವಿಶೇಷ ಗಹನವಾದ ವಿಷಯವನ್ನು ಕಲಿಸುವುದೇ ಏಕೀಕರಣ ರೀತಿಯು. ಇದಕ್ಕೆ ವಿಪರೀತವಾಗಿ ಕಲಿಸುವುದೇ ಪೃಥಕ್ಕರಣ ರೀತಿಯು, ಹೇಗೆಂದರೆ, ಕಲಿತಕ್ಕ ವಿಷಯವನ್ನು ಮೊದಲೇ ಹೇಳಿ, ಅದರ ಘಟಕಾ-

ವಯ ವ ವಾದಕಲಿಯುವವರಿಗೆ ಗೊತ್ತಿದ್ದ ಸುಲಭ ವಿಷಯಗ-
ಳನ್ನು ಕ್ರಮಕ್ರಮದಿಂದ ಬೇರೆಬೇರೆ ಕೂಡಿ ಅವು ಯಾವ ವಿಧ-
ದಿಂದ ಕೂಡಿಕೊಂಡಿರುತ್ತವೆ, ಎಂದು ತೋರಿಸುವಸುವರು.
ಇದಕ್ಕೆ ದೃಷ್ಟಾಂತವೆಂದರೆ, ಛಡಿಯಾರ ಮಾಡುವ ಕೆಲಸ
ಕಲಿಸಬೇಕಾದರೆ, ಅದರ ಬೇರೆಬೇರೆ ಚಕ್ರಗಳನ್ನು ತೆಗೆದು
ಕೊಂಡು ಅವುಗಳನ್ನು ತಕ್ಕಸ್ಥಳಗಳಲ್ಲಿ ಕೂಡಿಸುತ್ತಾ, ಆಯಾ
ಮ ಮರ್ಮಗಳನ್ನು ತಿಳಿಸುತ್ತಾ ಹೋಗಬಹುದು, ಇದೇ ಏಕೀಕ-
ರಣ ರೀತಿಯು. ಇದಕ್ಕೆ ವಿಪರೀತವಾಗಿ ಮೊದಲಿಗೇ ಒಂದು
ಛಡಿಯಾರ ತೆಗೆದುಕೊಂಡು, ಅದರ ಚಕ್ರಗಳನ್ನು ಒಂದರ ಹಿಂದೆ
ಇನ್ನೊಂದು ಬಿಚ್ಚುತ್ತಾ, ಅವು ಯಾವ ವಿಧದಿಂದ ಯಾಕ್ರಮದಿಂ-
ದಲೂ ಕೂಡಿಸಲ್ಪಟ್ಟಿದ್ದವೆಂಬದನ್ನು ತಿಳಿಸಿಕೊಡುತ್ತಾ ಹೋಗಿ-
ಕಲಿಸಬಹುದು, ಇದೇ ಪೃಥಕ್ಕರಣ ರೀತಿಯು. ಇದೇ ಮೇರೆ-
ಗೆ ತ್ರೈರಾಶಿಕ ನಿಯಮವನ್ನು ಕಲಿಸುವಾಗ ಮೊದಲು ತ್ರೈರಾಶಿ-
ಕದ ಅತಿಸುಲಭವಾದ ಕೆಲವು ಬಾಯಿಲೆಕ್ಕಗಳನ್ನು ವಿದ್ಯಾರ್ಥಿ-
ಗಳಿಗೆ ಕೇಳಿ ಅವುಗಳ ಉತ್ತರಗಳನ್ನು ಅವರಿಂದ ತೆಗೆದುಕೊಂ-
ಡು, ಆ ಎಲ್ಲ ಲೆಕ್ಕಗಳಲ್ಲಿ ಯಾವ ಜಾತಿಯ ಅಂಕಗಳಿದ್ದವೆ-
ರನ್ನು ಗುರುತಿಸಿ, ಯಾವ ಜಾತಿಯ ಅಂಕಿಗಳಿಂದ ಭಾಗಿಸಬೇಕಾ-
ಯಿತೆಂಬದನ್ನು ಅವರಿಗೆ ಚನ್ನಾಗಿ ತಿಳಿಸಿಕೊಟ್ಟು, ಹೀಗೆಯೆ

ನಿಲುಂಟಾಗುವ ತ್ರೈರಾಶಿಕದ ಸಾಧಾರಣನಿಯಮವನ್ನು ಅವರ ಮನಸ್ಸಿನಲ್ಲಿ ತುಂಬುವದೇ ಪಿಂಡೀಕರಣ ರೀತಿಯೂ, ಇದಕ್ಕೆ ವಿರೋಧವಾಗಿ, ಮೊದಲಿಗೇ ತ್ರೈರಾಶಿಕದ ಸಾಧಾರಣನಿಯಮನ್ನು ಹೇಳಿ ಅದಕ್ಕೆ ಸಾಕ್ಷಿಯಾಗಿ ಅತಿಸುಲಭವಾದ ಲೆಖ್ಖಗಳಿಂದ (ಯಾಂಬಾಯಿಪ್ರಮಾಣದಿಂದ) ಪ್ರತ್ಯಕ್ಷತ್ರದೆಯುಂದು- ತಿಳಿಸಿಕಲಿಸುವದೇ ಪೃಥಕ್ಕರಣ ರೀತಿಯು.

ಆದರೆ ಕಲಿಸುವಲ್ಲಿ ಯೆರಡು ಪ್ರಕಾರಗಳುಂಟು— ಕಲಿಸುವ ವಿಷಯವನ್ನು ಚನ್ನಾಗಿ ತಿಳಿಸಿ, ನಿಯಮಗಳ ಉಪ- ಪತ್ತಿಗಳನ್ನು, ವಾಕ್ಯಗಳ ತಾತ್ಪರ್ಯಗಳನ್ನು ಕಲಿಯುವವರ ಮನಸ್ಸಿನಲ್ಲಿ ತುಂಬುವ ಹಾಗೆ ವಿರಲವಾಗಿ ವೃತ್ತಕಡಿಸಿ ಕಲಿಸು ವದು ಒಂದು. ಕಲಿಯುವವರಿಗೆ ಯಾವ ಉಪಪತ್ತಿಯನ್ನಾಗ ತಾತ್ಪರ್ಯವನ್ನಾಗಲಿ ಯೇನು ತಿಳಿಸದೆ, ವಾಕ್ಯಗಳನ್ನಾ ಯಮಗಳನ್ನು ವಿದ್ಯಾರ್ಥಿಗಳಿಂದ ಬಾಯಿಪಾಠಮಾಡಿಸು ವದು ಮತ್ತೊಂದು. ಮೊದಲನೇ ಪ್ರಕಾರವು ವಿದ್ಯಾರ್ಥಿಗಳ ಲಕ್ಷ್ಯ ಪೂರ್ವವರೋಧನಕ್ಕೆ, ವಿಚಾರಶಕ್ತಿಗನಂಬಿ ಸುತ್ತದೆ. ಆ ಪ್ರಕಾರವಾಗಿ ಕಲಿಯುವವರು ತಮಗೆ ಕಲಿಸಿದ್ದೆಲ್ಲ ನಿ- ಜವೆಂದು ನಂಬುವ ಕಾರಣವೇನೆಂದರೆ, ಅದೆಲ್ಲ ನಿಜವೆಂದು ಅವರು ತಮ್ಮ ಸ್ವಂತ ಬುದ್ಧಿಯಿಂದ ತಿಳಿದುಕೊಂಡಿರುತ್ತಾರೆ,

ಹೂ ಅದೆಲ್ಲ ನಿಜವೆಂದು ಸಿದ್ಧಮಾಡಿ ತೋರಿಸಿಕೊಡಬೇಕಾಗಿ-
ರುತ್ತದೆ. ಯಾವದೇ ಪ್ರಕಾರವು ಆಗಲಿ, ಅದು ಆಧ್ಯಾತ್ಮಿಕ-
ಶಿಕ್ಷಣಕ್ಕೆ ಮಾತ್ರ ಸಂಬಂಧವಾದದ್ದೆಂದು ಮುಖ್ಯವಾಗಿ
ಅದನ್ನೇ ಜಾಗ್ರತೆ ವಹಿಸುತ್ತದೆ. ಈ ಯಾವದೇ ಪ್ರಕಾರದಾಗಿ
ನಿಲ್ಲುವವರು ತನಗೆ ಲಭಿಸುವ ಸತ್ಯದೆಂದು ಕ್ರಿಯೆ ಕಟುವ
ದಕ್ಕೆ ಮುಖ್ಯಾಧಾರವು ಅವರ ಗುರು ವಿನಯಾಪ್ರಿಯ ಗಳವ-
ಚನವೇ ಹೊರತು ಬೇರೆ ಯಾವದಿಲ್ಲ; ಇವೆರಡು ಪ್ರಕಾರಗಳಲ್ಲಿ
ಉತ್ತಮವಾದದ್ದು ಮೊದಲನೇದೇ ಎಂದು ನಾವು ಹೇಳುವ-
ಪ್ರಯೋಜನವಿಲ್ಲ. ಈ ಮೊದಲನೇ ಪ್ರಕಾರಕ್ಕೆ ಮೇಲೆ ಹೇಳಿ-
ರುವ ಯಾವದೇ ರೀತಿಗಳೂ ಕೆಳಗೆ ಬರೆಯಲ್ಪಡುವ ರೀತಿ-
ಗಳೂ ಆಗಿರುತ್ತವೆ.

ಮೇಲೆ ಹೇಳಿರುವ ವಿಶೇಷ ಪ್ರಕರಣವೆಂದು-
ಯಾವದೇ ಸಾಧಾರಣ ರೀತಿಗಳಲ್ಲದೆ, ಇನ್ನೂ ಹಲವು ಶಿಕ್ಷಣದ-
ಮಾರ್ಗಗಳು, ಯೋಗ ಯುಕ್ತಿಗಳುಂಟು. ಅವು ಯಾವವೆಂದರೆ,
ಭಕ್ತಿ, ಹಠಯೋಗ, ಸತ್ಯೋತ್ತರ, ಸಾಧ್ಯತ್ವ, ಪ್ರಾಪ್ತಿ ಇ-
ತ್ಯಾಂಬಿರು.

ಪ್ರಶ್ನೆಗಳನ್ನು ಮಾಡುತ್ತಲಿರುವವರೇ ಪ್ರಶ್ನೆಮಾರ್ಗವು-
ಸಾಧಕರಲ್ಲಿ ಕೆಲವರು ವಿಷಯಗಳನ್ನು ಹೇಳುತ್ತಿರುವದಕ್ಕಾ-

ಸ್ಥಿರವಾಗಿಯೂ, ಕಲಿಯುವ ವಿಷಯವನ್ನು ಶೋಧಿಸುವ-ಉತ್ತೇಜಕವಾಗಿಯೂ, ಈ ಮಾರ್ಗವನ್ನು ಅನುಸರಿಸಲು ಬೇಕಾದ ಶೋಧಕ ಪ್ರಶ್ನೆಗಳ ಸ್ವರೂಪದಿಂದ ಉಪಯೋಗಿಸಿದಾಗ ಈ ಮಾರ್ಗವು ಬುದ್ಧಿಯನ್ನು ಚೂಪುಗೊಳಿಸುವಲ್ಲಿ ಮುಖ್ಯವಾದ ಸಾಧನವಾಗಿರುತ್ತದೆ.

ಕಲಿಸುವಾಗ ತಾವು ಉಚ್ಚರಿಸುವ ವಾಕ್ಯಗಳ ಮುಖ್ಯ ಭಾಗಗಳನ್ನು ತಾವೇ ಉಚ್ಚರಿಸದೆ, ವಿದ್ಯಾರ್ಥಿಗಳಿಂದ ಉಚ್ಚಾರ ಮಾಡಿಸುವದೇ, ಇದು ಪೂರಣ-ಮಾರ್ಗವು - ಮೇಲೆ ಹೇಳಿರುವ ಶೋಧನಾ ಮಾರ್ಗಕ್ಕೂ ಇದಕ್ಕೂ ಬಹು ವ್ಯತ್ಯಾಸವಿದೆ. ಅದರಲ್ಲಿ ಪ್ರತ್ಯಕ್ಷವಾಗಿ ಪ್ರಶ್ನೆ ಮಾಡುವದೂ, ಇದರಲ್ಲಿ ಪ್ರಶ್ನೆಗಳಂಥ ವಾಕ್ಯಗಳನ್ನು ಉಚ್ಚರಿಸುವದೂ, ಇಷ್ಟೇ ಭೇದವಿದೆ.

ಪ್ರಶ್ನೋತ್ತರ ಮಾರ್ಗವೆಂದರೆ, ತಮ್ಮ ಮುಂದೆ ಒಂದು ವರ್ಗವನ್ನು ನಿಲ್ಲಿಸಿಕೊಂಡು ತಾವು ಕೇಳುವ ಪ್ರಶ್ನೆಗಳಿಗೆ ಎಲ್ಲರಿಂದ ಒಮ್ಮೆಲೆ ಉತ್ತರ ತೆಗೆದುಕೊಳ್ಳುವದು. ಈ ಮಾರ್ಗವನ್ನು ಸಾಮುದಾಯಿಕ ಪದ್ಧತಿಯೊಳಗೆ ಕೂಡಿಸಿ ಕೆಲವರು ಗಲಬಲ ಮಾಡುತ್ತಾರೆ. ಅವರೆಲ್ಲ ಒಂದಕ್ಕೊಂದು ತಾಗಿದ್ದಾಗ್ಯೂ ಕೇವಲ ಭಿನ್ನವಾದ ಉತ್ತರಗಳಾಗಿರುತ್ತವೆ.

ಸಾದೃಶ್ಯಮಾರ್ಗವು ಹ್ಯಾಗೆಂದರೆ, ಕಲಿಸುವ ವಸ್ತುವಿ-

ಗೆ ಸಮ್ಮತವಾದ ಬೇರೊಂದನ್ನು ಪ್ರತ್ಯಕ್ಷ ತೋರಿಸಿ ಯಾ ಅಂ-
ದರ ಚಿತ್ರವನ್ನು ತೋರದು, ಯಾ ಅಂಥಾದ್ದೊಂದನ್ನು ವಿದ್ಯಾ-
ರ್ಥಿಗಳ ಮನದೊಳಗೆ ತಂದು ತೋರ್ಪಡಿಸುವದು.

ಪ್ರಶ್ನೆಗಳನ್ನು ಕೇಳಿದರೆ, ಯಾವ ನಿಮಿತ್ತದಿಂದಲೂ ವಿ-
ದ್ಯಾರ್ಥಿಗಳಿಗೆ ನಡೆಸುವೆ. ಮಾತಾಡುವರೆ ಅವಕಾಶಕೊಡ-
ದೆ ಏಕಪ್ರಕಾರವಾಗಿ ಮಾತಾಡಿ ಹೇಳಿದಹಾಗೆ ಹೇಳುತ್ತಹೋ-
ಗುವದೇ ವ್ಯಾಖ್ಯಾನ ಮಾರ್ಗವು.

ಈ ಮಾರ್ಗಗಳಲ್ಲಿ ಒಂದಕ್ಕಿಂತ ಹೆಚ್ಚು ಏಕತ್ರಮಾಡಿಬ-
ಳಸಿದರೆ ಅದು ಮಿಶ್ರಮಾರ್ಗವು.

ಈ ಭಾಗದಲ್ಲಿ ಹೇಳಿರುವ ಪದ್ಧತಿಗಳನ್ನೂ ರೀತಿಗಳನ್ನೂ,
ಪ್ರಕಾರಗಳನ್ನು, ಮಾರ್ಗಗಳನ್ನೂ ಕುರಿತು ಮುಂದೆ ವಿಸ್ತಾರ-
ವಾಗಿ ಬರೆಯುವೆ.

## The School Grammer.

## ಶಾಲಾವ್ಯಾಕರಣವು.

೨ನೇ ಪ್ರಶ್ನೋತ್ತರದಲ್ಲಿ ವರ್ಣಗಳ ಉಚ್ಚಾರಸ್ಥಾನ-
ಗಳು ಹೇಳಲ್ಪಟ್ಟವೆ. ಆದರೆ ಆ ಸ್ಥಾನಗಳನ್ನು ಹೇಳುವದಕ್ಕೆ
ಸ್ವಲ್ಪ ತೊಂದರೆ ಯಾಗುತ್ತದೆ. ಏ ವರ್ಣ ಹೊರಗಿ

ಯಲ್ಲಾ ವರ್ಗೀಯ ವ್ಯಂಜನಗಳುಚ್ಚಾರಣೆಗೆ ಯಲ್ಲ ನಾಲಿಗೆಯ
ಸಹಾಯ ಬೇಕೇಬೇಕು. ಯಾವ ವ್ಯಂಜನವನ್ನೇ ಉಚ್ಚರಿಸು-
ವದಾಗಲು, ಮೂಲತಃ ಕಂಠದಿಂದ ಆ ಶಬ್ದೋಚ್ಚಾರಣವಾಗಿ.
ನಾಲಿಗೆಯ ಬೂಡ್ಡಿಯನ್ನು ಅಂಗಳದ ಹಿಂಭಾಗಕ್ಕೆ ಹಚ್ಚುವದ
ರಿಂದ ಕ ವರ್ಗವು, ನಾಲಿಗೆಯ ಮಧ್ಯವನ್ನು ಅಂಗಳಿಗೆ ಹಚ್ಚು-
ವದರಿಂದ ಚ ವರ್ಗವು, ನಾಲಿಗೆಯ ತುದಿಯನ್ನು ಹಲ್ಲುಗ-
ಳ ಬೂಡ್ಡಿಯ ಮೇಲ್ಭಾಗಕ್ಕೆ ಹಚ್ಚುವದರಿಂದ ಟ ವರ್ಗವು, ಹ-
ಲ್ಲುಗಳ ತುದಿಗೆ ನಾಲಿಗೆಯ ಕೊನೆಯನ್ನು ಹಚ್ಚುವದರಿಂದ ತವರ್ಗ-
ವು, ತುಟಿಗಳನ್ನು ಕೂಡಿಸೋಣದರಿಂದ ಪ ವರ್ಗವು ಉಂಟಾ-
<u>ಗುತ್ತದೆ</u>. ಅವರ್ಗೀಯಗಳಲ್ಲಿ ಯಕಾರ, ಶಕಾರಗಳುಚ್ಚಾರ ಚ
ವರ್ಗ<u>ಕ್ಕೆ</u> ಸರಿಯಾದವು, ರ, ಷ, ಲ, ಸ, ಳಕಾರಗಳ ಉಚ್ಚಾರ
ಟ ವರ್ಗ ತ ವರ್ಗಗಳ ಮಧ್ಯ, ಹಲ್ಲು (ಅಂದರೆ, ದಂತಮೂಲಕ್ಕೆ
ಜಿಹ್ವಾಗ್ರವನ್ನು ಹಚ್ಚಿ) <u>ಆಗುತ್ತದೆ</u>. ದಂತೋಷ್ಠಗಳ ಸಂಯೋ-
ಗದಿಂದ ವಕಾರವೂ, ಕಂಠದಲ್ಲಿ ಬರುವ: ಅಕಾರ ಧ್ವನಿ,
